

ಕಲ್ಯಾಣ ಕಿರಣ

ಅಕ್ಟೋಬರ್ 2005 ಬೆಲೆ : 5-00 ರೂ



ದೆಹಲಿಯಲ್ಲಿ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ
2005, ಅಕ್ಟೋಬರ್ 22,23,24. ಸರ್ವರಿಗೂ ಆದರದ ಸ್ವಾಗತ



ಶ್ರಾವಣ ಮಾಸದ ನಿಮಿತ್ತ ದಿ. 6-8-2005ರಿಂದ 17-9-2005 ರ ಬಸವ ಜ್ಯೋತಿ ನಡೆಸಿದ
ಗುಲಬರ್ಗಾದ ರಾಷ್ಟ್ರೀಯ ಬಸವ ದಳದವರು ದಿ.18-9-2005ರಂದು
ಏರ್ಪಡಿಸಿದ ಸಮಾರೋಪ ಸಮಾರಂಭವನ್ನು ಪೂಜ್ಯ ಮಾತಾಜಿ ಉದ್ಘಾಟಿಸಿದರು.



ದಿ.18.9.2005 ರಂದು ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ
ಹುಣ್ಣಿಮೆ ಕಾರ್ಯಕ್ರಮದಲ್ಲಿ ಪೂಜ್ಯ ಗುರುಗಳಿಗೆ ಗೌರವಾರ್ಪಣೆ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-35 ಸಂಚಿಕೆ-5 | ಬಸವ ಶಕೆ-872 ಸೆಪ್ಟಂಬರ್-2005 | ಆಜೀವ ಸದಸ್ಯತ್ವ 500 ರೂ. ವಾರ್ಷಿಕ ಚಂದಾ 50/- ರೂ.

ಬಸವ ಕಂದಳ, ದ್ವಾದಶ ಬಸವ ಸ್ತುತಿ

-ಸರೋಜಮ್ಮ ನಾಗರಾಜು, ಮೈಸೂರು

ಬಸವಾ ಎಂಬ ಮೂರಕ್ಷರದೊಳಗೆ ನೀನಡಗಿಹೆಯೋ
ಲಿಂಗಯ್ಯಾ ನೀನಡಗಿಹೆಯೋ................................॥ಪ॥

ಓಂ - ಅಕಾರ, ಉಕಾರ, ಮಕಾರ, ಓಂಕಾರವಾಗಿ
ಬಸವಾಕ್ಷರದೊಳಗೆ ನೀನಡಗಿಹೆಯೋ
ಲಿಂಗಯ್ಯ ನೀನಡಗಿಹೆಯೋ ॥1॥

ಶ್ರೀ - ನಿರಾಕಾರನಾದ ನಿನ್ನ, ವಿಶ್ವರೂಪ ತೋರಲೆಂದು
ಸಾಕಾರ ರೂಪದಿಂದ, ಬಸವ ಗುರುವಾಗಿ ಬಂದೆಯೋ
ಲಿಂಗಯ್ಯ, ಬಸವ ಗುರುವಾಗಿ ಬಂದೆಯೋ ॥2॥

ಗು - ಸರ್ವರಿಗೂ ನಿಲುಕಲೆಂದು, ಇಷ್ಟಲಿಂಗ ರೂಪಾಗಿ,
ಬಸವ ಗುರುದೇವನಿಂದ, ಕರಸ್ಥಲಕ್ಕೆ ಬಂದೆಯೋ
ಲಿಂಗಯ್ಯಾ, ಕರಸ್ಥಲಕ್ಕೆ ಬಂದೆಯೋ ॥3॥

ರು - ಬಸವ ಗುರು ಬೆಳಗಿದ, ನಿನ್ನ ಅಸಿತ್ತ್ವವನರಿತಂತೆ
ಶರಣರು, ಬಸವಲಿಂಗಾ ಬಸವಲಿಂಗಾ ಎಂದರೋ
ಲಿಂಗಯ್ಯಾ, ನಿನ್ನನ್ನು ಬಸವಲಿಂಗಾ ಎಂದರೋ ॥4॥

ಬ - ಬಸವಾ ಎಂಬ ಮೂರಕ್ಷರವು, ನವಪ್ರಣವವಾಗಿ,
ಬಕುತಿಯ ಮೂಡಿಸಿ, ಮುಕುತಿಯ ಕೊಡಿಸುವುದೋ
ಲಿಂಗಯ್ಯಾ, ಮುಕುತಿಯ ಕೊಡಿಸುವುದೋ ॥5॥

ಸ - ಬಸವಾ ಬಸವ ಎಂದು, ಅಭಯವ ಬೇಡುತಾ
ಬಸವಂಗೆ ಶರಣಾದಡೆ, ಭವವಡಗುವುದೋ
ಲಿಂಗಯ್ಯಾ, ಭವವಡಗುವುದೋ ॥6॥

ವ - ಬಸವನ ನಂಬಿದ, ಬಸವ ಭಕ್ತರೆಲ್ಲರೂ
ಬಸವಾಕ್ಷರತ್ರಯದ ಹಡಗನ್ನೇರಿ, ಭವಸಾಗರವ ದಾಂಟಿದರೋ
ಲಿಂಗಯ್ಯಾ, ಭವಸಾಗರವ ದಾಂಟಿದರೋ ॥7॥

ಲಿಂ - ಕರುಣಾಳು ಬಸವಣ್ಣ, ಆತ್ಮದ ಮೊರೆಗೆ ಧಾವಿಸಿ ಬರುವರೋ
ಲಿಂಗಯ್ಯಾ, ಧಾವಿಸಿ ಬಂದು, ಕರವಿಡಿದೆತ್ತಿಕೊಂಬರೋ
ಲಿಂಗಯ್ಯಾ, ಕರವಿಡಿದೆತ್ತಿ ಕೊಂಬರೋ ॥8॥

ಗಾ - ಮಾತೆಯ ತೆರದಿ, ಬಸವನ ಹೃದಯ
ಮಮತೆಯ ಕಡಲೋ, ನಿನಗಿಂತ ಮಿಗಿಲೋ
ಲಿಂಗಯ್ಯಾ, ಬಸವಯ್ಯ ನಿನಗಿಂತ ಮಿಗಿಲೋ ॥9॥

ಯ - ಬಸವನ ಪಥದಲಿ ನಡೆದವರೆಲ್ಲರು
ಸಾಗರದೊಳಗೆ ನದಿ ಬೆರತಂತೆ, ನಿನ್ನೊಳು ಬೆರೆತಿಹರೋ
ಲಿಂಗಯ್ಯಾ, ನಿನ್ನೊಳು ಬೆರೆತಿಹರೋ ॥10॥

ನ - ಬಸವಾಕ್ಷರದ ಚುಂಬಕ ಶಕ್ತಿಗೆ
ಭವಾತ್ಮರೆಲ್ಲಾ ದಿವ್ಯಾತ್ಮರಾಗಲು, ಧಾವಿಸಿ ಬಂದರೋ
ಲಿಂಗಯ್ಯಾ (ಇಂದೂ) ಧಾವಿಸಿ ಬರುವರೋ ॥11॥

ಮಃ - ಬಸವ ಕಂದಳ ಪ್ರಿಯ ಸರ್ವೇಶ ಪ್ರಭುವೆ
ನನ್ನಪ್ಪ ಬಸವಯ್ಯ, (ನನ್ನ) ಕರವಿಡಿದು ನಡೆಸಿಹರೋ
ಲಿಂಗಯ್ಯಾ, ನಿನ್ನೆಡೆಗೆ ನಡೆಸಿಹರೋ ॥12॥

★ ಕಲ್ಯಾಣ ಕಿರಣ ★

ಸಂಪುಟ 35 ಬಸವ ಶಕೆ 872 ಆಜೀವ ಸದಸ್ಯತ್ವ 500ರೂ

ಸಂಚಿಕೆ 5 ಅಕ್ಟೋಬರ್ 2005 ವಾರ್ಷಿಕ ಚಂದಾ 50/-ರೂ.



ದಿ. 13-10-2005 ವೀರಮಾತೆ
ಅಕ್ಕನಾಗಲಾಂಬಿಕಾ ಸಂಸ್ಮರಣೆ ಬಸವ ಧರ್ಮ
ವಿಜಯೋತ್ಸವ ಕಾರ್ಯಕ್ರ,ಮ



KALYANA KIRANA-Reg No.19988/70. Monthy Magazine Edited by Pujya Mate Kasturidevi and Published by Pujya Allama Prabhu Swamiji, at Padmasri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010



॥ಓಂ ಶ್ರೀ ಗುರು ಬಸವ ಲಿಂಗಾಯ ನಮಃ॥
866666

ಭಾರತದ ರಾಜಧಾನಿ ದೆಹಲಿಯಲ್ಲಿ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ 2005ರ ಅಕ್ಟೋಬರ್ 22,23 ಮತ್ತು 24ರಂದು

ಸ್ಥಳ : ದಿಲ್ಲಿಯ ದರಿಯಾಗಂಜ್ ಪ್ರದೇಶದಲ್ಲಿರುವ
ಮಹಾವೀರ ವಾಟಿಕಾ (ಎಂ.ಸಿ.ಡಿ) ಸಮುದಾಯ ಭವನ

ಲಿಂಗಾಯತ ಧರ್ಮ ಮಹಾಸಭಾ ಮತ್ತು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ 2005ನೇ ಇಸವಿಯ ಅಕ್ಟೋಬರ್ 22,23 ಮತ್ತು 24 ರಂದು ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವನ್ನು ಭಾರತದ ರಾಜಧಾನಿ ನವದೆಹಲಿಯಲ್ಲಿ ಏರ್ಪಡಿಸಲಾಗಿದೆ.

1.ಪ್ರತಿನಿಧಿ ಶುಲ್ಕ ಊಟ, ವಸತಿ, ಸಮ್ಮೇಳನ ನಿರ್ವಹಣೆ ಎಲ್ಲ ಸೇರಿ ಒಬ್ಬರಿಗೆ 600ರೂಗಳು. ದಿ.21 ರಂದು ರಾತ್ರಿ ಊಟದಿಂದ ದಿ.24ರ ರಾತ್ರಿ ಊಟದವರೆಗೆ ಬೆಳಗಿನ ಉಪಾಹಾರ, ಮಧ್ಯಾಹ್ನ ಮತ್ತು ರಾತ್ರಿಯ ಊಟದ ವ್ಯವಸ್ಥೆ ಸಮ್ಮೇಳನ ಸಮಿತಿಯದಾಗಿರುತ್ತದೆ. ಕರ್ನಾಟಕ ಎಕ್ಸ್‌ಪ್ರೆಸ್ಸು ಮಧ್ಯಾಹ್ನ 1 ಗಂಟೆಗೆ, ಕರ್ನಾಟಕ ಸಂಪರ್ಕಕ್ರಾಂತಿ (ಹಜರತ್ ನಿಜಾಮುದ್ದೀನ್ ಎಕ್ಸ್‌ಪ್ರಸ್) ಮಧ್ಯಾಹ್ನ 12 ಗಂಟೆಗೆ ದೆಹಲಿ ತಲುಪುತ್ತವೆ. ಮೊದಲನೆಯದು ನಯಿದಿಲ್ಲಿ ಸ್ಟೇಷನ್‌ನಲ್ಲಿ ಎರಡನೆಯದು ಹಜರತ್ ನಿಜಾಮುದ್ದೀನ್ ರೇಲ್ವೆ ಸ್ಟೇಷನ್‌ನಲ್ಲಿ ನಿಲ್ಲುತ್ತವೆ. 21ನೆಯ ತಾರೀಖು ಬೆಳಗ್ಗೆ 10 ರಿಂದ 25ನೆಯ ತಾರೀಖಿನ ಬೆಳಗಿನವರೆಗೆ ವಸತಿ ಗೃಹಗಳನ್ನು ಕಾಯ್ದಿರಿಸಲಾಗುತ್ತಿದೆ. ದಿ.22 ರಿಂದ 24 ವರೆಗೆ ಸಮ್ಮೇಳನ, 25 ರಂದು ದೆಹಲಿ ನಗರ ಸಂದರ್ಶನ (ತಮ್ಮ ಸ್ವಂತ ಖರ್ಚಿನಲ್ಲಿ) ಮಾಡುವ ಅಪೇಕ್ಷೆ ಉಳ್ಳವರು ಮತ್ತು 25ರ ನಂತರ ಉಳಿಯಬೇಕು ಎನ್ನುವವರು ತಮ್ಮ ಊಟ-ವಸತಿಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳಬೇಕು. ಅದೇ ರೀತಿ 21ರ ಬೆಳಗ್ಗೆ 10 ರಿಂದ ವಸತಿ ವ್ಯವಸ್ಥೆಯು ಆರಂಭವಾಗುವುದರಿಂದ ಅದಕ್ಕೆ ಮೊದಲು ಬಂದವರು ತಮ್ಮ ಊಟ-ವಸತಿಗಳ ವ್ಯವಸ್ಥೆ ತಾವೇ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ: ಕರ್ನಾಟಕದ ಇತರ ಭಾಗಗಳಿಂದ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡು, ಗೋವಾ ಮುಂತಾದ ಪ್ರದೇಶಗಳಿಂದ ಬರುವವರು ತಾವು ಬರುವ ಟ್ರೇನುಗಳು ತಲುಪುವ ಸಮಯವನ್ನು ನಮಗೆ ಮೊದಲೇ ತಿಳಿಸಬೇಕು.

2. ಬೆಂಗಳೂರಿನಿಂದ ಹೊರಡುವವರು ಕರ್ನಾಟಕ ಎಕ್ಸ್‌ಪ್ರೆಸ್‌ಗೆ ದಿ.19-10-2005 ರಂದು ಸಂಜೆ 6-30ಕ್ಕೆ, ಕರ್ನಾಟಕ ಸಂಪರ್ಕಕ್ರಾಂತಿ(ಹಜರತ್ ನಿಜಾಮುದ್ದೀನ್) ಎಕ್ಸ್‌ಪ್ರೆಸ್‌ಗೆ ಹೊರಡುವವರು ದಿ.19-10-2005 ರಂದು ರಾತ್ರಿ 11-30ಕ್ಕೆ ಹೊರಡಬೇಕಾಗುತ್ತದೆ. ಆದ್ದರಿಂದ ತಾವೇ ಆದರೂ ಬೇಗನೆ ರಿಜರ್ವೇಷನ್ ಮಾಡಿಸಿಕೊಳ್ಳಬೇಕು. ಇಲ್ಲವೇ ಬೆಂಗಳೂರಿನ ಕಾರ್ಯಾಲಯಕ್ಕೆ ಹಣವನ್ನು ಕಳಿಸಿ ರಿಸರ್ವೇಷನ್ ಮಾಡಿಸಲು ನಮಗಾದರೂ ತಿಳಿಸಬೇಕು.

ಬೆಂಗಳೂರಿನಿಂದ ದೆಹಲಿ-ಮರಳಿ-ದೆಹಲಿಯಿಂದ ಬೆಂಗಳೂರಿಗೆ ರಿಸರ್ವೇಷನ್ ಟಿಕೆಟ್ಟಿಗೆ 1200ರೂ ಒಬ್ಬರಿಗೆ. (ಸೇವಾ ಶುಲ್ಕ ಸೇರಿ)ಯಾವ ಟ್ರೇನ್ ಇಷ್ಟಪಡುವರೆಂಬುದನ್ನು ಬರೆದು ತಿಳಿಸಬೇಕು.(ಒಂದು ಬದಿಗೆ 600ರೂ)

3.ಪ್ರತಿನಿಧಿ ಶುಲ್ಕವನ್ನು ಮೊದಲೇ ಬೆಂಗಳೂರು ಕಾರ್ಯಾಲಯಕ್ಕೆ ಕಳಿಸಿ ರಸೀತಿ ಮತ್ತು ಗುರುತಿನ ಚೀಟಿ (ಐಡೆಂಟಟಿ ಕಾರ್ಡ್)ಪಡೆಯುವುದು ಕಡ್ಡಾಯವಾಗಿರುತ್ತದೆ. ಪ್ರತಿನಿಧಿ ಶುಲ್ಕ ಕಟ್ಟದೆ ಇರುವವರಿಗೆ ವಸತಿ ವ್ಯವಸ್ಥೆ ಮಾಡಲು ಸಾಧ್ಯವಾಗುವುದಿಲ್ಲ. ಅರ್ಜಿ ಫಾರ್ಮನ್ನು ತುಂಬಿ ಭಾವ ಚಿತ್ರ ಅಂಟಿಸಿ ಪ್ರತಿನಿಧಿ

ಶುಲ್ಕವನ್ನು ಬ್ಯಾಂಕ್ ಡ್ರಾಫ್ಟ್ ಮೂಲಕ ಬೆಂಗಳೂರು ಕಾರ್ಯಾಲಯಕ್ಕೆ ಕಳಿಸಬೇಕು. ಕರಪತ್ರದೊಡನೆ ಅರ್ಜಿ ಪತ್ರದ ಮಾದರಿ ಇದೆ. ಅದನ್ನು ಜೆರಾಕ್ಸ್ ಮಾಡಿಸಿಕೊಂಡು ತುಂಬಿ ಕಳಿಸಬೇಕು. ವಿವರಗಳಿಗಾಗಿ ಕರಪತ್ರ ಕಾಯ್ದಿರಿಸಿಕೊಳ್ಳಬೇಕು.

4.ನಯಿದಿಲ್ಲಿ ಮತ್ತು ಹಜರತ್ ನಿಜಾಮುದ್ದೀನ್ ರೇಲ್ವೆ ನಿಲ್ದಾಣಗಳಲ್ಲಿ ಕಾರ್ಯಕರ್ತರು ಬ್ಯಾನರ್, ಧ್ವಜ ಮತ್ತು ಸ್ಕಾರ್ಫ್ ಧರಿಸಿ ಕುಳಿತು ಮಾಹಿತಿ ನೀಡುವರು. ಆದ್ದರಿಂದ ದಿ.21-10-2005 ರಂದು ಟ್ರೇನಿನಿಂದ ಇಳಿದವರು ಕಾರ್ಯಕರ್ತರನ್ನು ಭೇಟಿಯಾಗಬೇಕು. ಒಂದು ವೇಳೆ ಕಾರ್ಯಕರ್ತರು ಭೇಟಿಯಾಗದೆ ಇದ್ದರೆ ನೇರವಾಗಿ ಸಮ್ಮೇಳನದ ಸ್ಥಳ ದರಿಯಾಗಂಜ್‌ನ ಮಹಾವೀರ ವಾಟಿಕಾಕ್ಕೆ ಬಂದು ಬಿಡಬೇಕು. ನಿಜಾಮುದ್ದೀನ್ ರೇಲ್ವೆ ಸ್ಟೇಷನ್‌ದಲ್ಲಿ ಗಾಡಿ ನಿಂತರೆ ಅಲ್ಲಿಂದ ನಯೀದಿಲ್ಲಿ ಸ್ಟೇಷನ್‌ಗೆ ಬೇರೆ ಟ್ರೇನಿನಲ್ಲಿ ಬಂದರೆ ಸಮ್ಮೇಳನದ ಸ್ಥಳ ಬಹಳ ಸಮೀಪವಾಗುತ್ತದೆ.

5.ರೇಲ್ವೆ ನಿಲ್ದಾಣದಿಂದ ವಸತಿ ಗೃಹಗಳವರೆಗೆ ಹೋಗಲು ಪ್ರತ್ಯೇಕವಾಗಿ ಸ್ಥಳೀಯ ಬಸ್‌ಗಳು ಅಗತ್ಯ ಬೀಳುತ್ತವೆ. ಅದರ ವೆಚ್ಚವನ್ನು ಪ್ರತಿನಿಧಿಗಳು ಪ್ರಯಾಣಿಸುವಾಗಲೇ ಕೊಡಬೇಕಾಗುತ್ತದೆ.

6.ಪ್ರತಿನಿಧಿ ಶುಲ್ಕ ಕಟ್ಟಿದವರಿಗೆ ಸಾಮೂಹಿಕ ವಸತಿ ವ್ಯವಸ್ಥೆ ಇರುತ್ತದೆ. ಪ್ರತ್ಯೇಕ ರೂಂಗಳ ವ್ಯವಸ್ಥೆ ಬೇಕಾದವರು ಬೇರೆಯಾಗಿ ಹಣವನ್ನು ಕಟ್ಟಬೇಕು. ಈ ಹಣವನ್ನು ಸಹ ಪ್ರ ತಿನಿಧಿ ಶುಲ್ಕ ಅಥವಾ ಅದಕ್ಕೂ ಮೀರಿದ ಕಾಣಿಕೆ ಕೊಡುವವರು ಮೊದಲೇ ಕಳಿಸಬೇಕು. ಏಕೆಂದರೆ ಪ್ರತ್ಯೇಕ ಕೋಣೆಗಳನ್ನು ಮೊದಲೇ ಕಾಯ್ದಿರಿಸಬೇಕಾಗುತ್ತದೆ. ಕೆಲವರು ಕಾಯ್ದಿಡಲು ಬಾಯಿಯಲ್ಲಿ ಹೇಳುತ್ತಾರೆ. ನಂತರ ಅವರು ಬರದೆ ಹೋದರೆ ಕಟ್ಟಿದ ಹಣ ಸಮ್ಮೇಳನ ಸಮಿತಿಯ ಮೇಲೆ ಬೀಳುತ್ತದೆ. ಯಾವ ದಿನಾಂಕದಿಂದ ಯಾವ ದಿನಾಂಕಕ್ಕೆ ಬೇಕು ಎನ್ನುವುದನ್ನು ಸಹ ಮೊದಲೇ ತಿಳಿಸಬೇಕು. ಒಂದು ದಿನಕ್ಕೆ ಸಾಮಾನ್ಯವಾಗಿ ಡಬ್ಬಲ್ ರೂಂ 500ರೂ (ಇಬ್ಬರಿಗೆ) ಎ.ಸಿ ಡಬ್ಬಲ್ ರೂಂ 750 ರೂ, ಸಿಂಗಲ್ ರೂಂ (ಒಬ್ಬರಿಗೆ ಮಾತ್ರ) 250ರೂ, ಈ ರೀತಿ ರೇಟುಗಳಿವೆ.

7. ರಾಷ್ಟ್ರೀಯ ಬಸವ ದಳ, ಗಣಾಚಾರ ದಳದ ಕಾರ್ಯಕರ್ತರು ಒಂದೆರಡು ದಿವಸ ಮೊದಲೇ ಬಂದರೆ ಜನರಿಗೆ ಸೂಚನೆ ಕೊಡಲು ಅನುಕೂಲವಾಗುತ್ತದೆ. ಒಂದೆರಡು ದಿವಸ ಅಥವಾ ಕೆಲವು ದಿನ ಮೊದಲೇ ಬರುವ ಸಾಧ್ಯತೆ ಇರುವ ಸ್ವಯಂ ಸೇವಕರು ಮೊದಲೇ ತಮ್ಮ ಹೆಸರುಗಳನ್ನು ಬೆಂಗಳೂರು ಕಾರ್ಯಾಲಯಕ್ಕೆ ತಿಳಿಸಿ ಪರವಾನಗಿ ಪಡೆಯಬೇಕು. ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ಸಿನಲ್ಲಿ ರಿಸರ್ವೇಷನ್ ಮಾಡಿಸದೆ ಸಾಮಾನ್ಯ ಬೋಗಿಯಲ್ಲಿ ಪಯಣಿಸಿದರೆ ಛಾರ್ಜು ಅರ್ಧಕ್ಕರ್ಧ ಉಳಿತಾಯವಾಗುತ್ತದೆಂಬುದನ್ನು ಆರ್ಥಿಕ ಅಶಕ್ತರು ಗಮನಿಸಬೇಕು.

8. ಶರಣ(ಶನಿ)ವಾರ ದಿ.22-10-2005ರಂದು ಬೆಳಿಗ್ಗೆ 10-30ಕ್ಕೆ ಸಮ್ಮೇಳನ ಉದ್ಘಾಟನೆ. ಮಧ್ಯಾಹ್ನ 3-30ರಿಂದ 5-30 ಚಿಂತನಗೋಷ್ಠಿ, ಸಂಜೆ 6-30 ರಿಂದ 9 ಜಗನ್ಮಾತಾ ಅಕ್ಕಮಹಾದೇವಿ ಕುರಿತು ವಿಶೇಷ ಚಿಂತನಗೋಷ್ಠಿ; ದಿ.23-10-2005 ಬೆಳಿಗ್ಗೆ 10-30 ಶರಣ ಸಂಗಮ -ಸಾಮೂಹಿಕ ಪ್ರಾರ್ಥನೆ; 3-30ರಿಂದ ಧರ್ಮಚಿಂತನಗೋಷ್ಠಿ, ಸಂಜೆ 6-30ಭಾರತೀಯ ಧರ್ಮಗಳ ನೇತಾರರ ಸಮಾವೇಶ, ದಿ.24ರಂದು ಬೆಳಿಗ್ಗೆ 10-30 ಭಾರತ ದೇಶದ ಅಖಂಡತೆ, ಪ್ರಗತಿ, ಶಾಂತಿಗಾಗಿ ಸಾಮೂಹಿಕ ಇಷ್ಟ ಲಿಂಗ ಪೂಜೆ, 3-30 ಮೆರವಣಿಗೆ ಹಾಗೂ ಶರಣ ಶರಣೆಯರಿಂದ ಪಥ ಸಂಚಲನ, ಸಂಜೆ 6-00 ರಿಂದ ಸಮಾರೋಪ ಸಮಾರಂಭ.

9. ಸಮ್ಮೇಳನ ಪ್ರತಿನಿಧಿಗಳು ಕಡ್ಡಾಯವಾಗಿ ಬಿಳಿಯ ವಸ್ತ್ರ, ಕಾವಿಯ ಸ್ಕಾರ್ಫ್ ಮತ್ತು ಬ್ಯಾಜ್ ಧರಿಸಿರಬೇಕು. ಐಡೆಂಟಿಟಿ ಕಾರ್ಡ್-ಗುರುತಿನ ಚೀಟಿ ಹೊಂದಿರಬೇಕು. [ಹಿಂದಿನ ಸಮ್ಮೇಳನದಲ್ಲಿ ಸ್ಕಾರ್ಫ್‌ಗಳು ಕಳೆದುಕೊಂಡವರನ್ನು ಗುರುತಿಸಲು ಬಹಳ ಸಹಕಾರಿಯಾಗಿವೆ ಎಂಬುದನ್ನು ನೆನಪಿಸಿಕೊಳ್ಳಬಹುದು.]

10. ವಿಶೇಷ ಸೂಚನೆ : ಪ್ರತಿ ನಿಧಿ ಶುಲ್ಕ ಕಟ್ಟದೆ ಇರುವವರಿಗೆ ವಸತಿ ಮತ್ತು ಊಟದ ವ್ಯವಸ್ಥೆ ಮಾಡುವ ಜವಾಬ್ದಾರಿ ಸಮಿತಿಯ ಮೇಲೆ ಇರುವುದಿಲ್ಲ.

ಧನ ಸಹಾಯಕ್ಕೆ ವಿನಂತಿ

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವನ್ನು ಸಂಯೋಜಿಸಲಾಗಿದ್ದು ಇದರ ಯಶಸ್ವಿ ನಿರ್ವಹಣೆಗಾಗಿ ಸಹೃದಯರು, ಸದ್ಭಕ್ತರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಮಹಾಪೋಷಕರು : ರೂ 10,000/- (ಹತ್ತು ಸಾವಿರ ಹಾಗೂ ಮೇಲ್ಪಟ್ಟು)
ಪೋಷಕರು : ರೂ 5,000/- (ಐದು ಸಾವಿರ ಹಾಗೂ ಮೇಲ್ಪಟ್ಟು)
ವಿಶೇಷ ದಾನಿಗಳು : ರೂ 3,000/- (ಮೂರು ಸಾವಿರ ಹಾಗೂ ಮೇಲ್ಪಟ್ಟು)
ದಾನಿಗಳು : ರೂ 1,000/-(ಒಂದು ಸಾವಿರ ಹಾಗೂ ಮೇಲ್ಪಟ್ಟು)
ಹಿತೈಷಿಗಳು : ರೂ 500/-(ಐದು ನೂರು ಹಾಗೂ ಮೇಲ್ಪಟ್ಟು)

ಸ್ವಯಂ ಪ್ರೇರಣೆಯಿಂದ ದೇಣಿಗೆಯನ್ನು ಎಷ್ಟಾದರೂ ಕೊಡಲು ಅವಕಾಶ ಉಂಟು. ಪ್ರಥಮ ಮಹಿಳಾ ಜಗದ್ಗುರುಗಳು, ಕೂಡಲ ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವು ನಡೆಯಲಿದ್ದು ಅನೇಕ ರಾಜಕೀಯ ನೇತಾರರು, ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉದಾರವಾಗಿ ದೇಣಿಗೆ ನೀಡಿ, ಸಮ್ಮೇಳನದ ಯಶಸ್ಸಿಗೆ ಸಹಕರಿಸಲು ಕೋರುತ್ತೇವೆ.

ಪ್ರತಿನಿಧಿ ಶುಲ್ಕ , ಕಾಣಿಕೆ , ಇತ್ಯಾದಿ ಕಳುಹಿಸುವವರು ಕೆಳಕಂಡಂತೆ ಬ್ಯಾಂಕ್ ಡ್ರಾಫ್ಟ್, ಬರೆಯಬೇಕು. ಪರವೂರಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.

1. Basava Mahamane Charitable Trust, Payable at BANGALORE. ಅಥವಾ 2. Basava Mahamane Charitable Trust Payable at NEW DELHI

ವ್ಯವಹರಿಸುವ ವಿಳಾಸಗಳು :

1.ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿ,ಬಸವ ಮಂಟಪ, 2035, 20ನೇ ಮೇನ್, 2ನೆಯ ಬ್ಲಾಕು, ರಾಜಾಜಿನಗರ, ಬೆಂಗಳೂರು-560010, ಕರ್ನಾಟಕ ರಾಜ್ಯ, ದೂ: 080-23325335/23322790.

2. Pujya Sri Channabasavananda Swamiji, Organiser, First Lingayat Dharma Conference Committee
63A/1, 3rd floor, Laxmi Market Munirka, , NEW DELHI-110067
Mobile: (0)9891566242, (0)9891809708

ಮಹಾವೀರ ವಾಟಿಕಾಕ್ಕೆ ದಿಗ್ದರ್ಶನ

ಮಹಾವೀರ ವಾಟಿಕಾ (ಎಂ.ಸಿ.ಡಿ) ಸಮುದಾಯ ಭವನವು ದೆಹಲಿಯ ದರಿಯಾಗಂಜ್ ಪ್ರದೇಶದಲ್ಲಿ ಲಾಲ್ ಕಿಲ್ಲಾ ರಸ್ತೆಗೆ ಹೊಂದಿಕೊಂಡಂತೆ ಇದೆ. ಟ್ರೇನಿನಿಂದ ಇಳಿದವರು ಇಲ್ಲಿಗೆ ಬಂದು ಬಿಟ್ಟರೆ ಪ್ರಸಾದ ಪೂರೈಸಿಕೊಂಡು, ಪ್ರತಿನಿಧಿ ಶುಲ್ಕ ಕಟ್ಟುವವರೂ ಕಟ್ಟಿ, ಅವರಿಗಾಗಿ ನಿಗದಿ ಮಾಡಿರುವ ವಸತಿ ಸ್ಥಳಗಳಿಗೆ ಅಲ್ಲಿಂದ ಹೋಗಬಹುದಾಗಿರುತ್ತದೆ.



2005, ಅಕ್ಟೋಬರ್ 22,23 ಮತ್ತು 24 ರಂದು ನಡೆಯುವ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನದ ಜೊತೆಗೆ ಉತ್ತರ ಭಾರತದ ಐತಿಹಾಸಿಕ ಸ್ಥಳಗಳ ಸಂದರ್ಶನ

"ದೇಶವನ್ನು ತಿರುಗಿ ನೋಡು, ಕೋಶವನ್ನು ಓದಿ ನೋಡು" ಎಂಬುದು ಅರಿವಿನ ವಾಣಿ. ವೈವಿಧ್ಯಮಯವಾದ ಪ್ರಕೃತಿ ಸಂಪತ್ತು, ವರ್ಣಮಯ ಸಂಸ್ಕೃತಿ ಇವೆಲ್ಲವನ್ನು ಅರಿತು ಸಮಕ್ಯ್ ದೃಷ್ಟಿಯಿಂದ ದೆಹಲಿಯಲ್ಲಿ ನಡೆಯಲಿರುವ ಸಮ್ಮೇಳನಕ್ಕೆ ಹೊಂದಿಕೊಂಡಂತೆ ಅಂಥ ಸ್ಥಳಗಳ ಪ್ರವಾಸವನ್ನು ಏರ್ಪಡಿಸಲಾಗಿದೆ.

<u>ಸೂಚನೆ:</u> 1. ಕೆಳಗೆ ಕಾಣಿಸಿರುವ ಹಣದಲ್ಲಿ ಬೆಂಗಳೂರಿನಿಂದ ದೆಹಲಿಗೆ ಪುನಃ ಬೆಂಗಳೂರಿಗೆ ಹೋಗಿ-ಬರುವ ರೈಲ್ವೆ ಛಾರ್ಜು, ಪ್ರತಿನಿಧಿ ಶುಲ್ಕ ಎಲ್ಲ ಸೇರಿವೆ.

2. ಇತರ ಊರುಗಳಿಂದ ರಿಸರ್ವೇಷನ್ ಮಾಡಿಕೊಂಡು ನೇರವಾಗಿ ದೆಹಲಿಗೆ ಬರುವವರು ಸೂಚಿಸಿರುವ ಹಣದಲ್ಲಿ ರೇಲ್ವೆ ಟಿಕೆಟಿನ ಒಂದು ಕಡೆಯ ಹಣವನ್ನು ಕಡಿಮೆ ಮಾಡಿ ಕೊಡಬೇಕು. ವಾಪಸ್ ಬರುವುದನ್ನು ದಿನಾಂಕ ಅನುಸರಿಸಿ ಪ್ರವಾಸದ ಸಂಯೋಜಕರು ರಿಸರ್ವೇಷನ್ ಮಾಡಿಸುವರು ತಾವು ವಾಪಸ್ ಆಗಬೇಕಾದ ರೈಲ್ವೆ ಸ್ಟೇಷನ್ ಹೆಸರನ್ನು ತಿಳಿಸಬೇಕು.

1. 14 ದಿವಸಗಳ ಪ್ರವಾಸ

ದಿ. 24-10-2005 ರಂದು ಸಮ್ಮೇಳನದ ಸಮಾರೋಪ ; 25ರಂದು ದೆಹಲಿ ನಗರದ ಸಂದರ್ಶನ. ದಿ.26ರಿಂದ ಪ್ರವಾಸ ಪ್ರಾರಂಭ. ನವ ದೆಹಲಿ, ಅಯೋಧ್ಯೆ, ಋಷಿಕೇಶ, ಹರದ್ವಾರ, ಸಾರಾನಾಥ್, ಬುದ್ಧಗಯಾ, ಗಯಾ, ವಾರಣಾಸಿ(ಕಾಶಿ), ಅಲಹಾಬಾದ್, ಆಗ್ರಾ, ಮಥುರಾ ಇಲ್ಲಿಂದ ಬೆಂಗಳೂರಿಗೆ ವಾಪಸ್ಸು. 2ನೇ ದರ್ಜೆಯ ಸ್ಲೀಪಿಂಗ್ ಕೋಚ್‌ದಲ್ಲಿ ದೆಹಲಿಯಿಂದ ಮಥುರಾವರೆಗೆ 49 ಪ್ರಯಾಣಿಕರ (3' x 2) ಸೀಟಿನ ಬಸ್ಸಿನಲ್ಲಿ ಪ್ರಯಾಣ.6500-00(ಆರುಸಾವಿರದ ಐದು ನೂರು) ಒಬ್ಬರಿಗೆ.

2. 12 ದಿವಸಗಳ ದೋಧಾಮ ಯಾತ್ರೆ

ದಿ. 26ರಿಂದ ಪ್ರವಾಸ ಪ್ರಾರಂಭ, ನವ ದೆಹಲಿಯಿಂದ ಹೊರಟು ಋಷಿಕೇಶ, ಹರದ್ವಾರ, ಕೇದಾರ ನಾಥ, ಬದರಿನಾಥ, ನವ ದೆಹಲಿಯಿಂದ ಬೆಂಗಳೂರಿಗೆ 2ನೇ ಕ್ಲಾಸ್ ಸ್ಲೀಪಿಂಗ್ ಕೋಚ್ ರೇಲ್ವೆದಲ್ಲಿ ಪ್ರಯಾಣ 8000-00 (ಎಂಟು ಸಾವಿರ)ರೂಗಳು ಒಬ್ಬರಿಗೆ.

ಈ ಬಸ್ಸು ಕಠಿಣವಾದ ಬೆಟ್ಟಗುಡ್ಡಗಳ ದಾರಿಯಲ್ಲಿ ಸಾಗಬೇಕಾದ್ದರಿಂದ 27 ಪ್ರಯಾಣಿಕರ (2' x 2') ಸೀಟಿನ ಬಸ್ಸಿನಲ್ಲಿ ಹೋಗಬೇಕಾಗುತ್ತದೆ.

3. 8 ದಿವಸಗಳ ಗಿರಿಧಾಮ ಯಾತ್ರೆ

ದಿ. 26ರಿಂದ ಪ್ರವಾಸ ಪ್ರಾರಂಭ. ನವ ದೆಹಲಿ, ಕತ್ರಿ ಸಾರಾಯ್, ವೈಷ್ಣೋದೇವಿ-ಜಮ್ಮು ಮಾರ್ಗವಾಗಿ, ಅಮೃತಸರ-ಸ್ವರ್ಣಮಂದಿರ, ವಾಘಾ (ಭಾರತ-ಪಾಕಿಸ್ತಾನ ಗಡಿ), ಕುರುಕ್ಷೇತ್ರ ಇಲ್ಲಿಂದ ಬೆಂಗಳೂರಿಗೆ. 2ನೇ ಕ್ಲಾಸ್ ಸ್ಲೀಪಿಂಗ್ ಕೋಚ್ ರೇಲ್ವೆದಲ್ಲಿ ಪ್ರಯಾಣ. ಇದು 49 ಪ್ರಯಾಣಿಕರ (3' x 2') ಸೀಟಿನ ಬಸ್ಸು. ರೂ.5500-00 (ಐದು ಸಾವಿರದ ಐದು ನೂರು) ಒಬ್ಬರಿಗೆ..

ಬೆಂಗಳೂರಿನಿಂದ ಹೊರಡುವ ದಿನಾಂಕ.19-10-2005 ಸಂಜೆ 6-30ಕ್ಕೆ ಕರ್ನಾಟಕ ಎಕ್ಸ್‌ಪ್ರೆಸ್ ಅಥವಾ ರಾತ್ರಿ 11-30ಕ್ಕೆ ಕರ್ನಾಟಕ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್‌ಗೆ ಹೊರಡಲಾಗುವುದು.

ಮತ್ತಷ್ಟು ವಿಶೇಷ ಸೂಚನೆಗಳಿಗೆ ಮುಂದಿನ ಪುಟವನ್ನು ನೋಡಿರಿ.

ಉತ್ತರ ಭಾರತ ಸಂದರ್ಶನ ಪ್ರವಾಸಿಕರಿಗೆ ವಿಶೇಷ ಸೂಚನೆ

1. ಲಗೇಜ್ ಬಹಳ ತರಬಾರದು; ಅಗತ್ಯವಿರುವ ಊಟದ ತಟ್ಟೆ,-ಲೋಟ ಹಾಸಿಗೆ-ಹೊದ್ದಿಕೆ, ನೀರಿನ ಬ್ಯಾಗ್, ನಿತ್ಯವೂ ಉಪಯೋಗಿಸುವ ಅವರವರ ಔಷಧಿ, ಗುರುತಿನ ಚೀಟಿ, ವಯಸ್ಸಿನ ಪ್ರಮಾಣ ಪತ್ರ, (ವೃದ್ಧರಿಗೆ ರೇಲ್ವೆ ರಿಯಾಯಿತಿ ಇರುವುದರಿಂದ ವಯಸ್ಸಿನ ಪ್ರೂಫ್ ಅಗತ್ಯ ಬೀಳಬಹುದು.) ಇವುಗಳನ್ನು ತರಬೇಕು. ಆಭರಣಗಳನ್ನು ಹೆಚ್ಚು ಧರಿಸಿರಬಾರದು.
2. ನಿಗದಿ ಪಡಿಸಿರುವ ಹಣದಲ್ಲಿ ಬೆಂಗಳೂರಿನಿಂದ ದೆಹಲಿ-ಪುನಃ ಬೆಂಗಳೂರು, ಇದರ ರೇಲ್ವೆ ಛಾರ್ಜು, ಸಮ್ಮೇಳನ ಶುಲ್ಕ, 3 ಬಗೆಯ ಪ್ರವಾಸದ ಶುಲ್ಕ ಸೇರಿರುತ್ತದೆ.
3. ಬಸ್ ಪ್ರವಾಸದಲ್ಲಿ ನಾಲ್ಕು ವರ್ಷದ ಕೆಳಗಿನ ಮಕ್ಕಳಿಗೆ ಅರ್ಧ ಛಾರ್ಜು ಸೀಟು ಇರುವುದಿಲ್ಲ 4 ವರ್ಷದ ಮೇಲಿನ ವಯಸ್ಸಿನವರಿಗೆ ಪೂರಾ ಛಾರ್ಜು ಪ್ರತ್ಯೇಕ ಸೀಟು ಕೊಡಲಾಗುವುದು.
4. ಸಮ್ಮೇಳನದ ಸಮಯ ಮತ್ತು ಪ್ರವಾಸ ಕಾಲದಲ್ಲಿ ಸಾಮೂಹಿಕ ವಸತಿ ವ್ಯವಸ್ಥೆ ಇರುತ್ತದೆ. ಪ್ರತ್ಯೇಕ ಕೋಣೆ ಬೇಕಾದವರು ತಮ್ಮ ತಮ್ಮ ಹಣದಲ್ಲಿ ವ್ಯವಸ್ಥೆ ಮಾಡಿಕೊಳ್ಳಬೇಕು. ಕೋಣೆಗಳು ಲಭ್ಯವಿರುತ್ತವೆ.
5. ಬಾಡಿಗೆ ಪಡೆಯುವ ಬಸ್ಸುಗಳ ಸೀಟು ಫುಲ್ ಆದರೆ ಮಾತ್ರ ಬಸ್ಸು ಹೊರಡಿಸಲಾಗುವುದು. ಇಲ್ಲದಿದ್ದರೆ ರದ್ದು ಮಾಡಲಾಗುವುದು. ಅಡ್ವಾನ್ಸ್‌ಆಗಿ ಕೊಟ್ಟ ಪ್ರವಾಸದ ಹಣವನ್ನು ವಾಪಸ್ಸು ಮಾಡಲಾಗುವುದು.
6. ಪ್ರವಾಸ ವ್ಯವಸ್ಥಾಪಕ ಸಂಸ್ಥೆಯವರು ಸಾಮೂಹಿಕ ವಿಮೆಯನ್ನು (Group Insurance)ಮಾಡುವ ಭರವಸೆ ನೀಡಿದ್ದಾರೆ.
7. ಪ್ರವಾಸ ಕಾಲದಲ್ಲಿ ಮ್ಯುಸಿಯಮ್ ಸಂದರ್ಶನಕ್ಕೆ ಪ್ರವೇಶ ಟಿಕೆಟ್, ಕುದುರೆ ಸವಾರಿ, ದೋಣಿ ವಿಹಾರ ಮುಂತಾದವು ಐಚ್ಛಿಕವಾಗಿದ್ದು ಪ್ರವಾಸಿಕರೇ ಭರಿಸಬೇಕು. ಕೆಲವು ಸ್ಥಳಗಳಲ್ಲಿ ಯಾವ ವಾಹನವೂ ಹೋಗದೆ ನಡೆಯಬೇಕಾಗುತ್ತದೆ. ಆಗ ನಡೆಯಲು ಅಸಮರ್ಥರಾದವರು ಕುದುರೆ ಮೇಲೆ, ಡೋಲಿಯಲ್ಲಿ ಹೋಗಬೇಕಾಗುತ್ತದೆ. ಅಂಥವರು ಪ್ರತ್ಯೇಕವಾಗಿ ಅಂತಹ ತಮ್ಮ ಖರ್ಚು ಭರಿಸಬೇಕು.
8. ಟ್ರೇನಿನಲ್ಲಿ ಹೋಗುವಾಗ ಬರುವಾಗ ಊಟದ ಜವಾಬ್ದಾರಿ ಅವರವರದೆ. ಸಮ್ಮೇಳನದ ಮೂರು ದಿವಸ ಮತ್ತು ಪ್ರವಾಸ ಕಾಲದ ಊಟದ ಜವಾಬ್ದಾರಿ ಸಂಸ್ಥೆಯದು.
9. ಪ್ರವಾಸಕ್ಕೆ ಬರಲು ಆಸಕ್ತಿ ಇರುವವರು 2000ರೂ ಪ್ರವಾಸದ ಅಡ್ವಾನ್ಸ್, ಪ್ರತಿನಿಧಿ ಶುಲ್ಕ 600ರೂ, ಒಂದು ಕಡೆ ರೇಲ್ವೆ ಛಾರ್ಜು 600/= ಒಟ್ಟು 3200ರೂ ಮುಂಗಡವಾಗಿ ಆದಷ್ಟು ಬೇಗನೆ ಕಳಿಸಬೇಕು. ಟೂರ್ ಹೊರಡುವ 10 ದಿವಸ ಮೊದಲಿಗೆ ಪೂರ್ತಿ ಹಣ ಕಟ್ಟಬೇಕು. ಅಥವಾ ಪೂರ್ಣಹಣವನ್ನು ಬೇಗನೆ ಕೊಟ

ಬೇಗ ಬೇಗನೆ ಸಂಪರ್ಕಿಸಿ, ನಿಮ್ಮ ಸ್ಥಳಗಳನ್ನು ಕಾಯ್ದಿರಿಸಿಕೊಳ್ಳಿರಿ

ಅತ್ಯುತ್ತಮವಾದ ಆಧ್ಯಾತ್ಮಿಕ ಅನುಭವವನ್ನು ಪಡೆಯಬಲ್ಲಿರಿ. ಬ್ಯಾಂಕ್ ಡ್ರಾಫ್ಟ್ ತೆಗೆಸುವವರು ಕೆಳಗೆ ಕೊಟ್ಟಿರುವ ಹೆಸರಿಗೆ, ಬೆಂಗಳೂರು ಶಾಖೆಗೆ ತೆಗೆಸಬೇಕು.

ಸಂಪರ್ಕಿಸುವ ವಿಳಾಸ :

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ, ಬಸವ ಮಂಟಪ, 2035, 20ನೇ ಮೇನ್,
2ನೆಯ ಬ್ಲಾಕು, ರಾಜಾಜಿ ನಗರ, ಬೆಂಗಳೂರು-560010
ದೂರವಾಣಿ ಸಂಖ್ಯೆ : 080-23325335/ 23322790

ಸಂಪಾದಕೀಯ :

1. ಬಡವರಿಗೆ ಅನ್ನದಾನ ? / ಶರಣರ ಪ್ರಸಾದ ದಾಸೋಹ

ಬೆಂಗಳೂರಿನ ಒಂದು ಜೈನ ಸಂಸ್ಥೆಯವರು ಬಡವರಿಗೆ ಅನ್ನದಾನ ಮಾಡುವ ಒಂದು ಫೋಟೋ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಕೆಲವು ಜನ ಜೈನ ತರುಣರು, ಗಣ್ಯರು ಒಂದು ಸಂಘಟನೆಯನ್ನು ಮಾಡಿಕೊಂಡಿದ್ದು ವಾರಕ್ಕೊಮ್ಮೆ- ಭಾನುವಾರದಂದು ಧಾರ್ಮಿಕ ಪೂಜೆಯ ನಂತರ ಜಿನಾಲಯದ ಹೊರಗಡೆ ಬಡವರಿಗೆ ಅನ್ನದಾನ ಮಾಡುವರಂತೆ, ಅದಕ್ಕಾಗಿ ನಿಧಿಯನ್ನು ಮಾಡಿದ್ದಾರೆ. ತನು- ಮನ- ಧನ ಮೂರನ್ನೂ ತೊಡಗಿಸಿಕೊಂಡಿರುವ ಅವರ ಸೇವೆ ಅಭಿನಂದನೀಯ, ವ್ಯಕ್ತಿಯು ಗಳಿಸುವ ಲಾಭದಲ್ಲಿ ಬೇರೆ ಬೇರೆ ಕಾರ್ಯಕ್ಕೆ ಅರ್ಥವನ್ನು ಬಳಸಬೇಕು. ದೇವ ದ್ರವ್ಯ, ಜೀವ ದ್ರವ್ಯ, ಸಾಮಾನ್ಯ ದ್ರವ್ಯ ಎಂದು ಮೂರು ಪ್ರಕಾರವಾಗಿ ವಿಂಗಡಿಸುವರಂತೆ. ಗುಡಿ ಗುಂಡಾರ, ದೇವಕಾರ್ಯಕ್ಕೆ ವಿನಿಯೋಗಿಸುವುದು ಒಂದನೆಯ ಬಗೆ. ಪ್ರಾಣಿ-ಪಕ್ಷಿಗಳ ಹಿತ, ಅನಾಥರು- ದೀನರ ಸಂರಕ್ಷಣೆ ಇತ್ಯಾದಿ ಕಾರ್ಯಕ್ಕೆ ಬಳಸುವುದು ಎರಡನೆಯ ಬಗೆ. ಜೀವನ ನಿರ್ವಹಣೆ ಇತ್ಯಾದಿಗಳಿಗೆ ಬಳಸುವುದು ಸಾಮಾನ್ಯ ದ್ರವ್ಯ. ನಿಜಕ್ಕೂ ಈ ವರ್ಗೀಕರಣ ಬಹಳ ಉತ್ತಮ ಮತ್ತು ಅನುಕರಣೀಯ.

ಬೆಂಗಳೂರು ರಾಷ್ಟ್ರೀಯ ಬಸವ ದಳ, ಮುಖ್ಯವಾಗಿ ಗಣಾಚಾರ ದಳದವರು ಅಭಿನಂದನೀಯ ಕಾರ್ಯ ಮಾಡುತ್ತಿದ್ದಾರೆ. ಬಡ ವಿದ್ಯಾರ್ಥಿಗಳಿಗೆ ನೆರವು, ಅಗತ್ಯ ಬಿದ್ದವರಿಗೆ ವೈದ್ಯಕೀಯ ನೆರವು- ಹೀಗೆ ಸದಾ ನೀಡುತ್ತಿರುತ್ತಾರೆ. ಪ್ರತಿ ಭಾನುವಾರ ನಡೆಯುವ ಶರಣ ಸಂಗಮ ಪ್ರಾರ್ಥನೆಗೆ ಮೊದಲು ಬಂದು ಎಲ್ಲರಿಗೂ ಸ್ಕಾರ್ಫ್ ವಿತರಿಸುವುದು, ನಂತರ ಪಡೆಯುವುದು, ಮಡಿಸಿಟ್ಟು ಜೋಡಿಸುವುದು, ಪ್ರಸಾದ ನೀಡುವುದು, ನಂತರ ತಟ್ಟೆ- ಲೋಟ ತೊಳೆದು ಒರೆಸಿ, ಎಣಿಸಿ ಶುಭ್ರವಾಗಿ ಇಡುವುದು ಬಹಳ ಅಚ್ಚುಕಟ್ಟಾಗಿ ಮಾಡುತ್ತಾರೆ. ಸಭೆ-ಸಮಾರಂಭ ನಡೆದಾಗ ಕುಡಿಯುವ ನೀರು ವಿತರಿಸುವುದು ಪ್ರತಿಯೊಂದು ಶಿಸ್ತು. ಆಗಸ್ಟ್ 10, ಬೆಂಗಳೂರು ಪುರಭವನದಲ್ಲಿ ನಡೆದ ಬಸವ ಪಂಚಮಿ ಕಾರ್ಯಕ್ರಮದ ಶಿಸ್ತು, ಅಚ್ಚುಕಟ್ಟು, ಸೇವೆ ನೋಡಿ ಅದೇ ಮೊದಲ ಬಾರಿಗೆ ನಮ್ಮ ಸಭೆಯಲ್ಲಿ ಭಗವಹಿಸಿದ್ದ ಓರ್ವರು ಅಭಿಮಾನದಿಂದ ಪತ್ರ ಬರೆದಿದ್ದಾರೆ.

ಪ್ರತಿ ಭಾನುವಾರ ಬಸವ ಮಂಟಪದಲ್ಲಿ ಶರಣ ಸಂಗಮದ ನಂತರ ಪ್ರಸಾದ ದಾಸೋಹವಿರುತದೆ. ಅದರಲ್ಲಿ ಸಾಕಷ್ಟು ಜನ ಬಡವರು ಬಂದು ಉಂಡು ಹೋಗುತಾರೆ. ಅವರು ಪ್ರಾರ್ಥನಾ ಸಭೆಗೆ ಬಂದ ಶರಣರಲ್ಲ; ಊಟಕ್ಕಾಗಿಯೇ ಬಂದವರು ಎಂಬುದೂ ನಮಗೆ ಗೊತ್ತಿರುತದೆ. ಆದರೆ ನಾವು ಅದನ್ನು "ಬಡವರಿಗೆ ಅನ್ನದಾನ" ಎನ್ನುವುದಿಲ್ಲ "ಶರಣರ ಪ್ರಸಾದ ದಾಸೋಹ" ಎನ್ನುತ್ತೇವೆ; ಗೇಟಿನ ಹೊರಗೆ ನಿಲ್ಲಿಸಿ ಊಟಕ್ಕೆ ಹಾಕುವುದಿಲ್ಲ; ಕೂರಿಸಿ ಪ್ರಸಾದ ಎಡೆ ಮಾಡುತ್ತೇವೆ. ಏಕೆಂದರೆ ಅಪ್ಪ ಬಸವಣ್ಣನವರು ಕೊಟ್ಟಿರುವ ಉದಾತ ತತ್ವ "ದಾಸೋಹ." ಅದು ಬಡವರಲ್ಲಿ ಕೀಳರಿಮೆಯನ್ನು ಬೆಳೆಸದೆ ಸ್ವಾಭಿಮಾನವನ್ನು ಸಂರಕ್ಷಿಸುತ್ತದೆ.

2. ಶಿವನು ಮಾತನಾಡಿದ್ದು ಯಾವ ಭಾಷೆಯಲ್ಲಿ ?

ಶರಣ.ಎಂ.ಆರ್.ಪಂಪನಗೌಡರು, ಬಳ್ಳಾರಿ ಇವರ ಎರಡು ಪತ್ರ ಲೇಖನಗಳು ಪ್ರಕಟಗೊಂಡಿವೆ. ನಿಜಕ್ಕೂ ಇವರ ಸಂಶೋಧನಾತ್ಮಕ ಬುದ್ಧಿ, ಆಳವಾದ ಅಧ್ಯಯನ ಕುರಿತು ನನಗೆ ಸಂತೋಷವೆನಿಸುತ್ತಿದೆ. ಕಲ್ಯಾಣ ಕಿರಣವನ್ನು ನಷ್ಟದಲ್ಲಿ ನಡೆಸುತ್ತಿದ್ದರೂ ನಮ್ಮ ಆಲೋಚನೆಗಳನ್ನು ಸಂವಹನ ಮಾಡುವ ಮಾಧ್ಯಮ ಎಂದು, ಇದೂ ಒಂದು ಬಗೆಯ ಜ್ಞಾನಾನ್ನ ದಾಸೋಹ ಎಂದು ನಡೆಸುತ್ತೇವೆ. ಬರುವ ಪ್ರತಿ ಲೇಖನಗಳು ಮಹತ್ವಪೂರ್ಣವಾಗಿ ಇರುತ್ತವೆ.

ಹೆಚ್ಚಿನ ಜನಕ್ಕೆ ಪುಕ್ಕಟ್ಟೆಯೇ ಕಳಿಸಿದಂತಿದೆ ನಮ್ಮ ವ್ಯವಹಾರ! 1970ರಲ್ಲಿ ಕಲ್ಯಾಣ ಕಿರಣ ಆರಂಭಿಸಿದಾಗ ಆಜೀವ ಸದಸ್ಯತ್ವ 100ರೂ ಇತ್ತು. ಅವರಿಗೆ ಇನ್ನೂ ಕಳಿಸುತ್ತಿದ್ದೇವೆ.

ಎಂದರೆ, ಕೆಲವರು ನಮಗೆ ವ್ಯವಹಾರ ಜ್ಞಾನವಿಲ್ಲ ಎಂದು ನಗುತಾರೆ. ನಾವು ಕಳಿಸುವ ಉದ್ದೇಶ ಜನರು ಓದಲಿ, ಪ್ರಜ್ಞಾವಂತರಾಗಲಿ ಎಂದು. ಮಹತ್ವಪೂರ್ಣವಾದ ಲೇಖನ ಬರೆದು ಪ್ರತಿಕ್ರಿಯೆಗೆ ಕಾಯುತ್ತೇವೆ. ಆಗ ಇಂಥ ಲೇಖನ ಓದಿದಿರಾ? ಎಂದು ಭೇಟಿಯಾದಾಗ ಕೇಳಿದಾಗ ಅವರು 'ಇಲ್ಲ' ಎಂದರೆ ನಮಗೆ ಬಹಳ ಆಘಾತವಾಗುತದೆ. ಕೆಲವರಂತೂ ಪತ್ರಿಕೆ ಕೈ ಸೇರುತ್ತಲೇ ಮೊದಲನೆ ಪುಟದಿಂದ ಕಡೆಯ ಪುಟದವರೆಗೆ ಓದುತಾರೆ. ಅಂಥವರನ್ನು ಕಂಡರೆ ನಮಗೆ ಅಭಿಮಾನ.

ಶರಣ ಪಂಪನಗೌಡ ಅಂಥ ಓದುಗರು. ಮಾತ್ರವಲ್ಲ ವ್ಯಾಪಕವಾಗಿ ಸಾಹಿತ್ಯವನ್ನು, ಪ್ರೌಢ ಗ್ರಂಥಗಳನ್ನು ಓದುತ್ತಾರೆ. ಲಿಂಗಾಯತ ಮತ್ತು ವೀರಶೈವದ ಚರ್ಚೆ ನಡೆಯುವಾಗ ಅವರು ಕೊಟ್ಟ ಒಂದು ಹೋಲಿಕೆ ಇಂದಿಗೂ ನನ್ನನ್ನು ತಲೆದೂಗುವಂತೆ ಮಾಡಿವೆ. ಒಂದು ನೂರು ಎಕರೆ ಜಮೀನಿದೆ. ನೂರು ಜನಕ್ಕೆ ಒಂದೊಂದು ಎಕರೆಯಂತೆ ಹಿಸ್ಸೆ ಬಂದಿದೆ. ಅಂದಾಗ ಒಂದು ಎಕರೆಯ ಮಾಲಿಕ ಇಡೀ ಜಮೀನು ತನ್ನದು ಎನ್ನಲೂ ಬರದು! ಲಿಂಗಾಯತ ಸಮಾಜ 100 ಎಕರೆ ಜಮೀನಿನಂತೆ. ಹಲವಾರು ಜಾತಿ- ಮತ- ಪಂಥ ವೃತ್ತಿ ಪಂಗಡಗಳವರು ಇದರಲ್ಲಿ ಪ್ರವೇಶ ಪಡೆದಿದ್ದಾರೆ. ಅದರಲ್ಲಿ 'ವೀರಶೈವ' ಒಂದು ಹಿಸ್ಸೆ; ಅಂದಾಗ 'ವೀರಶೈವ 'ಲಿಂಗಾಯತ ಸಮಾಜದಲ್ಲಿ ಒಂದು ಉಪ ಪಂಗಡವಾದೀತೇ ವಿನಾ ಇಡೀ ಧರ್ಮವಾಗದು. ಇಡೀ ಸಮಾಜಕ್ಕೆ ಅನ್ವಯಿಸದು. ಆದ್ದರಿಂದ ಎರಡೂ ಪದಗಳನ್ನು ಸಮಾನಾರ್ಥದಲ್ಲಿ ಬಳಸಬಾರದು.

ಧಾರವಾಡದ ಕೆಲವು (ಅತಿ) ಬುದ್ಧಿವಂತರು ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸ್ಥಳೀಯವಾಗಿ ಅಖಿಲ ಭರತ ವೀರಶೈವ / ಲಿಂಗಾಯತ ಮಹಾಸಭೆ ಎಂದು ಬದಲಿಸಿರುವುದಾಗಿ ಯಾರೋ ಹೇಳಿದರು. ನಿಜಕ್ಕೂ ಹೀಗೆ ಮಾಡಿದ್ದರೆ ಇದು ಮೂರ್ಖತನದ ಪರಮಾವಧಿ. ಏಕೆಂದರೆ ಆಗ ಈ ಮಹಾಸಭೆ ಎಲ್ಲ ಲಿಂಗಾಯತರಿಗೆ ಅಲ್ಲ; ಕೇವಲ ವೀರಶೈವ ಲಿಂಗಾಯತರಿಗೆ ಸಂಬಂಧಿಸಿದ್ದು ಎಂದು ಕರೆದುಕೊಂಡಂತೆ ಆಗುತ್ತದೆ. ಬಹುಶಃ ಆ ಮುಖಂಡರ ಆಂತರಂಗಿಕ ಆಶಯವೂ ಅದೇ ಆಗಿರಬಹುದು.

ಶ್ರೀ ಪಂಪನಗೌಡರು ಹರಪ್ಪಾ- ಮೊಹೆಂಜೊದಾರೋದು ಚಿತ್ರಲಿಪಿ ಎಂದು ಹೇಳಿ ಈ ಬಗ್ಗೆ ಮೊ. ಛ. ಕಂಗಾಳಿ ಎಂಬುವವರು ವಿಶೇಷವಾಗಿ ಅಧ್ಯಯನ ಮಾಡಿ ಪುಸ್ತಕ ಬರೆದಿರುವ ಬಗ್ಗೆ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಎರಡು ನೆನಪುಗಳನ್ನು ಉಲ್ಲೇಖಿಸಲು ಇಷ್ಟ ಪಡುತ್ತೇನೆ.

1. 1976ರಲ್ಲಿ ಇಂಗ್ಲೆಂಡಿಗೆ ಹೋದಾಗ ಲಂಡನ್ ವಿಶ್ವವಿದ್ಯಾಲಯದಲ್ಲಿ ನಾನು ಮುಖ್ಯ ಅತಿಥಿಯಾಗಿ 'ಲಿಂಗಾಯತಿಸಮ್ ಪಾಸ್ಟ್ ಅಂಡ್ ಪ್ರೆಸೆಂಟ್' ಎಂಬ ಬಗ್ಗೆ ಭಾಷಣ ಮಾಡಿದೆ. ಕೆಂಬ್ರಿಡ್ಜ್‌ದಿಂದ ರಿಚರ್ಡ್ ಗಾಂಬ್ರಿಚ್ ಎನ್ನುವವರು ಬಂದಿದ್ದರು. ತಮ್ಮ ವಿ.ವಿಗೆ ಬರಲು ಆಹ್ವಾನಿಸಿದ್ದರು. ಹೋಗಿದ್ದಾಗ ಬಹಳಷ್ಟು ವಿಷಯ ಚರ್ಚಿಸಿದೆವು. ಆಗ ಹೇಳಿದರು "ದ್ರಾವಿಡ" ಭಾಷೆಗಳಾದ ತಮಿಳು, ಕನ್ನಡ, ತೆಲುಗು, ಮಲೆಯಾಳಿ ಉಪಭಾಷೆಗಳಾದ ಬಡಗ, ತುಳು, ಕೊಡವ ಇತ್ಯಾದಿ ಜೀವಂತವಿವೆ. ಇವುಗಳ ತಾಯಿ, ದ್ರಾವಿಡರ ಮೂಲ ಭಾಷೆ ಯಾವುದು? ಎಂಬ ಬಗ್ಗೆ ಅಧ್ಯಯನ ನಡೆದಿದೆ. ಬಲೂಚಿ ಸ್ಥಾನದ ಒಂದು ಗುಡ್ಡಗಾಡು ಬುಡಕಟ್ಟಿನ ಜನ ಮಾತನಾಡುವ ಬ್ರಹೂಯಿ ಎಂಬ ಭಾಷೆಯೆ ಆ ತಾಯಿ ಭಾಷೆ ಇರಬಹುದು. ಏಕೆಂದರೆ ಅದಕ್ಕೆ ಸ್ವಂತ ಲಿಪಿ ಇಲ್ಲವಾದರೂ ಅದರಲ್ಲಿ ತಮಿಳು, ಕನ್ನಡ, ತೆಲುಗು ಇತ್ಯಾದಿ ಭಾಷೆಗಳ ಪದಗಳು ಇವೆ." ಎಂದು ಹೇಳಿದರು.

2. ಲಂಡನ್ ವಿ.ವಿಯ ಡಿಪಾರ್ಟ್‌ಮೆಂಟ್ ಆಫ್ ಓರಿಯಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್ ಮುಖ್ಯಸ್ಥ ಪಿಯಾಟೋಗಾರ್ಸ್ಕಿ ಎಂಬ ವಿದ್ವಾಂಸರೊಡನೆ ನಾನು ಚರ್ಚಿಸುತಿದ್ದೆ. ಅವರು ಬಹಳ ಹಿಂದೆ ಭಾರತಕ್ಕೆ ವಿಶೇಷವಾಗಿ ತಮಿಳು ನಾಡಿಗೆ ಬಂದು 'ವೀರಶೈವ'ದ ಅಧ್ಯಯನ ಮಾಡಿದ್ದರು. ನಾನು 1974ರಲ್ಲಿ ಪಾಂಡಿಚೆರಿಗೆ ಹೋದಾಗ ಅಲ್ಲಿದ್ದ ವೀರಶೈವ ಮಠ ಮತ್ತು ಅದರ ಮಠಾಧೀಶರನ್ನು ನೋಡಿ ವೀರಶೈವ ಬೇರೆ ಲಿಂಗಾಯತ ಬೇರೆ ಎಂಬುದನ್ನು ಅರಿತುಕೊಂಡು ಅಲ್ಲಿಂದ ಬರುತ್ತಲೇ ವಿವರವಾದ ಲೇಖನ ಬರೆದು ಬಸವ

ವಚನ ಪದ ಪ್ರಯೋಗ ಕೋಶ ಪುಸ್ತಕದ ಪೀಠಿಕೆಯಲ್ಲಿ ಪ್ರಕಟಿಸಿದೆ.

[ಆವರೆಗೂ ಯಾರಿಗೂ ಸ್ಪಷ್ಟ ಚಿಂತನೆ ಇರಲಿಲ್ಲ. ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರಿಗೂ ಗೊತ್ತಿರಲಿಲ್ಲ. ಹೀಗಾಗಿ ಅವರು ತಮ್ಮ ಪುಸ್ತಕಗಳಲ್ಲಿ ವೀರಶೈವ ಪದವನ್ನೇ ಬಳಸಿದ್ದರು. ನಾನೂ ಸಹ ಹಾಗೆಯೇ ಬಳಸಿದ್ದೆ. ನಮಗೆ ಸತ್ಯ ಮನವರಿಕೆಯಾಗುತ್ತಲೇ ಚಕ್ಕನೆ ಗ್ರಹಿಸಿ, ಅಂದಿನಿಂದಲೇ ನಿಜ ಸಂಗತಿಯನ್ನು ಪ್ರತಿಪಾದಿಸತೊಡಗಿದೆವು. ಆದರೆ ಬಹುಪಾಲು ವಿರಕ್ತ ಮಠಾಧೀಶರಿಗೆ ಇನ್ನಾದರೂ ಮನವರಿಕೆಯಾಗುತ್ತಲಿಲ್ಲ. ಆದರೂ ಆಗದಂತೆ ನಟಿಸುವವರು ಮತ್ತೆ ಕೆಲವರು. ಕೇವಲ ಬೆರಳ ಮೇಲೆಣಿಸುವಷ್ಟು ಸ್ವಾಮಿಗಳು, ಸಾಹಿತಿಗಳು "ಲಿಂಗಾಯತ" ಪದವನ್ನು ಈಗೀಗ ಅರ್ಥ ಮಾಡಿಕೊಂಡು ಬಳಸುತ್ತಿದ್ದಾರೆ. ಈ ನಿಧಾನ ಗತಿ ನೋಡಿ ನನಗೆ ನಾಚಿಕೆ- ದುಃಖ ಎರಡೂ ಆಗುತ್ತವೆ; ಒಂದು ನಗೆ ಹನಿ ನೆನಪಾಗುತ್ತದೆ. ಒಮ್ಮೆ ಓರ್ವ ಶಾಲಾ ತನಿಖಾಧಿಕಾರಿಗಳು ಬಂದು ಬಾಲಕರನ್ನು ಕೇಳಿದರು, "ಐದು ಐದ್ಲೆ ಎಷ್ಟು?" ಎಲ್ಲರೂ ಒಕ್ಕೊರಲಿನಿಂದ ಐವತ್ತು ಎಂದರು. ಅಧಿಕಾರಿ ಗಾಬರಿಯಾಗಿ, "ಏನು ಮೇಷ್ಟ್ರೆ, ಏನು ಕಲಿಸಿದ್ದೀರಿ?" ಎಂದು ಕೋಪಗೊಂಡು ನುಡಿದರು "ಸಾರ್ ಮೊದಲು ಐದು ಐದ್ಲೆ ಐನೂರು ಎನ್ನುತ್ತಿದ್ದರು. ನಾನು ಹೊಡೆದು, ಬಡಿದು ಇಷ್ಟಕ್ಕೆ ತಂದಿದ್ದೇನೆ. ಇನ್ನಷ್ಟು ಸಮಯ ಹೋದ ಮೇಲೆ ಐದು ಐದ್ಲೆ ಇಪ್ಪತ್ತೈದು ಅಂತಾರೆ ಅಂತ ಕಾಣುತ್ತೆ." ಬಹುಪಾಲು ಲಿಂಗಾಯತ ಮಠಾಧೀಶರ ಪರಿಸ್ಥಿತಿ ಹೀಗೇ ಇದೆ. 'ವೀರಶೈವ" ಎಂದು ತಲೆ ಚಿಟ್ಟು ಹಿಡಿಸುತ್ತಿದ್ದರು. ಈಗ ಐದು ಐದ್ಲೆ ಐವತ್ತು ಎಂದರೆ 'ಬಾರ್' ಹಾಕುತ್ತ ವೀರಶೈವ/ ಲಿಂಗಾಯತ ಮಾಡುತ್ತಿದ್ದಾರೆ. ಬಹುಶಃ ಅನ್ಯ ಸಮಾಜದವರು ಬುದ್ಧಿ ಹೇಳಿದರೆ ವೀರಶೈವದ ಪಳೆಯುಳಿಕೆ ಉದುರಿಸಿ ಲಿಂಗಾಯತ ಪದಕ್ಕೆ ಅಂಟಿಕೊಳ್ಳಬಹುದೇನೋ?"]

ಪಿಯಾಟೋಗಾರ್ಸ್ಕಿ ಅವರಿಗೆ ಬಸವ ಪ್ರಣೀತ ಲಿಂಗಾಯತ ಧರ್ಮದ ವಿವರಗಳನ್ನು ತಿಳಿಸಿದಾಗ ಅದು ವೀರಶೈವವಲ್ಲ ಎಂದಾಗ ಅವರು ಸಂತೋಷದಿಂದ "ಯೂ. ಆರ್. ರೈಟ್" ಎಂದರಲ್ಲದೆ, ಬಹುದಿನಗಳಿಂದ ಇದ್ದ ಸಂದೇಹ ನಿವಾರಿಸಿದಿರಿ ಎಂದು ಪ್ರಶಂಸಿಸಿದರು.

3. ಬಸವನ ಬಾಗೇವಾಡಿ ತಾಲ್ಲೋಕಿನ ಒಂದು ಗ್ರಾಮದಲ್ಲಿ (ಹೆಸರು ಮರೆತಿದೆ. ಬಹುಶಃ ನಂದ್ಯಾಳ ಇರಬಹುದೆ?) ಒಂದು ಗುಡಿ ಇದೆ. ಅದರಲ್ಲಿ ಒಂದು ಪೆಟ್ಟಿಗೆಯಲ್ಲಿ ಹೊತ್ತಿಗೆ ಇವೆ. ಎಂದು ಯಾರೋ ಹೇಳಿದ್ದರಿಂದ ಅಲ್ಲಿಗೆ ಹೋದೆವು. ವರ್ಷಕ್ಕೊಮ್ಮೆ ಮಾತ್ರ ತೆಗೆಯುವರಂತೆ. ಪೂಜಾರಿಗೆ ಹೇಳಿ ಕಳಿಸಿದೆವು. ಬಂಡನಾದರೂ ಅವನು ಪೆಟ್ಟಿಗೆ ತೆರೆಯಲು ಸಿದ್ಧನಿರಲಿಲ್ಲ. ಅಮ್ಮಾವ್ರು ಬಂದಿದ್ದಾರೆ ತೆಗಿ ಎಂದು ಊರಿನವರು ಒತ್ತಾಯಿಸಿದ ಮೇಲೆ ಸ್ನಾನ ಮಾಡಿ, ಮಡಿ ಉಟ್ಟು ಬಂದು ತೆಗೆದ. ಒಳಗೆ ವಚನಗಳ ತಾಡ ಓಲೆ ಕಟ್ಟುಗಳು ಇದ್ದವು. ನಂದಿ ಆಗಮ ಲೀಲೆ ಕೃತಿ ಇತ್ತು. ಮತ್ತೊಂದು ವಿಶೇಷವೆಂದರೆ ತಾಡ್‌ವೋಲೆಯ ಮೇಲೆ ವಿಚಿತ್ರವಾದ ಲಿಪಿಗಳಿದ್ದವು. ಚೈನಾ, ಜಪಾನ್ ಭಾಷೆ ತರಹ. ಅದರಲ್ಲಿ ಚಿಕ್ಕ ಚಿಕ್ಕ ಚಿತ್ರಗಳಿದ್ದವು. ನಮಗೇನೂ ತಿಳಿಯಲಿಲ್ಲ.

ಇಂದು (8-9-2005) ಪಂಪನಗೌಡರು ತಮ್ಮ ಲೇಖನದೊಡನೆ ಒಂದು ಮುದ್ರಿತ ಪುಸ್ತಕ, "ಸೈಂಧವೀ ಲಿಪಿ ಕಾ ಗೊಂಡಿ ಮೆ ಉದ್ವಾಚನ್" (Decipherment of Indus Script in Gondi) ಇದರ ಕವರ್ ಪುಟದ ಜೆರಾಕ್ಸ್ ಕಳಿಸಿದ್ದಾರೆ. ಲೇಖಕರು ಮೋ. ಥ. ಕಂಗಾಳಿ, ಕವರ್ ಪುಟದ ಮೇಲಿರುವ ಚಿತ್ರಾಕ್ಷರಗಳನ್ನು ನೋಡುತ್ತಲೇ ನಾನು ಎಂದೋ ಆ ಗ್ರಾಮದ ಗುಡಿಯೊಳಗಣ ಪೆಟ್ಟಿಗೆಯಲ್ಲಿದ್ದ ತಾಡ ಓಲೆಗಳಲ್ಲಿ ಕಂಡ ಚಿತ್ರಾಕ್ಷರಗಳು ಸ್ಮೃತಿ ಪಟಲದ ಮೇಲೆ ಮೂಡಿ, ಸೋಜಿಗವೆನಿಸಿತು.

ಸಂಸ್ಕೃತವು ಆರ್ಯನ್ನರು ನೀಡಿದ ಭಾಷೆ. ಅದರ ಉಗಮಕ್ಕೂ ಪೂರ್ವದಲ್ಲಿ ಶಿವನು, ಅವನ ಅನುಯಾಯಿಗಳು ಮಾತನಾಡಿರಬಹುದಾದ ಮತ್ತು ಬೋಧಿಸಿರಬಹುದಾದ ಭಾಷೆ ಇರಲೇಬೇಕು. ಆಗಮಗಳು ಶಿವ ಬೋಧೆಯಾಗಿದ್ದರೂ ಅವು ವೈದಿಕ - ಶೈವದ pol-luted Shaivism 'ಪ್ರತಿಪಾದಕ ಗ್ರಂಥಗಳೇ ವಿನಾ ಶಿವನು ಬೋಧಿಸಿದ 'ಶುದ್ಧ' ವಾಣಿಗಳಲ್ಲ.

ಪ್ರಾಕೃತಿಕ ಭಾಷೆ ಎಂದು ಪಾಲಿ, ಅರ್ಧಮಾಗಧಿಗಳನ್ನು ಕರೆದ ಆರ್ಯರು ಟಪೈಶಾಚಿಕಟ ಭಾಷೆಯೊಂದರ ಉಲ್ಲೇಖ ಮಾಡುತ್ತಾರೆ. ಸಂಸ್ಕೃತದ ಬೃಹತ್ಕಥೆ ಮೊದಲು ಪೈಶಾಚಿಕ ಭಾಷೆಯಲ್ಲೇ ಹೇಳಲ್ಪಟ್ಟುದು ಎನ್ನುತ್ತಾರೆ. ಪೈಶಾಚಿಕ ಭಾಷೆ ಎಂದು ಆರ್ಯನ್ನರು ಕರೆದ ಟಶಿವಭಾಷೆಟಯೇ ಬಹುಶಃ ದ್ರಾವಿಡ ಭಾಷೆಗಳ ತಾಯಿ ಇರಬಹುದು. ಅದು ಚಿತ್ರ ಲಿಪಿಯ ಮೂಲಕವೇ ಅಂದು ಸಂವಹನಗೊಳ್ಳುತ್ತಿದ್ದಿರಬಹುದು ಎಂದು, ಊಹಿಸಬಹುದಾಗಿದೆ. ★

3. ವಿಧಿ ವಶ ಮತ್ತು ಲಿಂಗೈಕ್ಯ

ಗೋರೆ ಮಠದ ಶ್ರೀಗಳು ಪಂಚಭೂತದಲ್ಲಿ ಲೀನ

ಕುಮಟಾ, 25-ರಸ್ತೆ ಅಪಘಾತದಲ್ಲಿ ಶನಿವಾರ ವಿಧಿವಶರಾದ ಗೋರೆ ಮಠದ ಶ್ರೀ ನಿರ್ಮಲಾನಂದ ಸ್ವಾಮಿಗಳ ಸಂಸ್ಕಾರವು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಇಂದು ಶ್ರೀ ಮಠದಲ್ಲಿ ಜರುಗಿತು. ಮುಂಜಾನೆ 7-30ಕ್ಕೆ ಆರಂಭವಾದ ವಿಧಿ-ವಿಧಾನಗಳು ಸುಮಾರು ಮೂರು ತಾಸು ನಡೆದವು. ಗೋಕರ್ಣದ ಪುರೋಹಿತ ರಾಮಕೃಷ್ಣ ಭಟ್ಟ, ಶಂಕರಲಿಂಗ ಹಾಗೂ ಇತರ ಋತ್ವಿಜರು ವಿಧಿ-ವಿಧಾನದ ನೇತೃತ್ವ ವಹಿಸಿದ್ದರು.

ಹೀಗೊಂದು ವಾರ್ತೆಯು ಸಂಯುಕ್ತ ಕರ್ನಾಟಕ ದಿ.26-9-2005ರ ಸಂಚಿಕೆಯ 6ನೆಯ ಪುಟದಲ್ಲಿ ಪ್ರಕಟವಾಗಿತ್ತು. ನಮಗೇನು ಶ್ರೀಗಳು, ಅವರ ಕಾರ್ಯವಿಸ್ತಾರದ ಪರಿಚಯವಿಲ್ಲ. ಆದರೆ ಈ ವಾರ್ತೆಯಲ್ಲಿದ್ದ ಕೆಲವು ಪದಗಳು, ವಾಕ್ಯಗಳು ನನ್ನ ಗಮನ ಸೆಳೆದುವಲ್ಲದೆ ವಿಶ್ಲೇಷಣೆ ಮತ್ತು ತೌಲನಿಕ ವ್ಯಾಖ್ಯಾನ ಅಗತ್ಯವೆನಿಸಿತು. ವೈದಿಕ ಆಚರಣೆಯೇ ಹಿಂದು ಧರ್ಮ ಎನಿಸಿಕೊಂಡರೆ ಲಿಂಗಾಯತರು ಹಿಂದುಗಳಲ್ಲ ಎಂಬುದನ್ನು ದೃಢಪಡಿಸಿತು. ಆ ವಾಕ್ಯಗಳು ಹೀಗಿವೆ.

1.ಶೀರ್ಷಿಕೆ : ಗೋರೆ ಮಠದ ಶ್ರೀಗಳು ಪಂಚಭೂತದಲ್ಲಿ ಲೀನ

2.ರಸ್ತೆ ಅಪಘಾತದಲ್ಲಿ ಶನಿವಾರ ವಿಧಿವಶರಾದ ಗೋರೆ ಮಠದ.......

ಬಸವ ಸಂಸ್ಥಾಪಿತ ಲಿಂಗಾಯತ ತತ್ತ್ವಶಾಸ್ತ್ರ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಶರಣರು "ಲಿಂಗೈಕ್ಯ"ರಾಗುವರು, ವಿಧಿವಶರಾಗರು. ಬಸವಣ್ಣನವರ ಬಗ್ಗೆ ಸಮಕಾಲೀನ ಶರಣರು "ಹುಚ್ಚು ಹಿಡಿಸಿಕೊಂಡು" ಪ್ರೀತಿಸಿದ್ದಾರೆ, ಆರಾಧಿಸಿದ್ದಾರೆ, ಗೌರವಿಸಿದ್ದಾರೆ. ಕಾರಣವೇನು? ಕಾರಣ ಹತ್ತಾರು, ನೂರಾರು, ಸಾವಿರಾರು, ಅಸಂಖ್ಯಾತ. ನಡೆ-ನುಡಿ, ಊಟ-ಉಪಚಾರ, ಮಾತು-ಕೃತಿ, ಸಂಭಾಷಣೆ-ಸಂಸ್ಕೃತಿ ಎಲ್ಲದರಲ್ಲೂ ಧರ್ಮಪಿತ ಬಸವಣ್ಣನವರು ಪರಿವರ್ತನೆ ತಂದಿದ್ದಾರೆ.

ಕರಣಾದಿಗಳೆಲ್ಲ ಪರಶಿವನೆಂದ ಬಳಿಕ
ಆ ಕರಣಾದಿಗಳ "ಭೋಜನ ಕೊಳ್ಳು" ಎನಬಾರದೆಂದು
ಪರಶಿವ ಪ್ರಸಾದ ಎಂಬ ನಾಮವಿಟ್ಟನಯ್ಯಾ ಶ್ರೀಗುರು. -ಸಿದ್ಧರಾಮೇಶ್ವರ 976

ಲಿಂಗಾಯತ ಸಂಸ್ಕೃತಿಯಲ್ಲಿ "ಊಟ ಮಾಡಬನ್ನಿ" ಎನ್ನುವುದಿಲ್ಲ; ಪ್ರಸಾದ ಸ್ವೀಕರಿಸಿ ಎನ್ನಲಾಗುವುದು. ಅನ್ನ ನೀಡು, ಸಾರು ನೀಡು ಎನ್ನುವುದಿಲ್ಲ; "ಅನ್ನ ಎಡೆಮಾಡು" ಎನ್ನಲಾಗುವುದು.

ಎಲ್ಲರ ಶರೀರಗಳು ಸತ್ತಾಗ ಪಂಚಭೂತಗಳಲ್ಲೇ ಲೀನವಾಗುತ್ತವೆ. ಆದರೆ ಅದು ಮುಖ್ಯವಲ್ಲ. ಸೃಷ್ಟಿಕರ್ತನಾದ ಲಿಂಗದೇವನೇ ಅಂಗದ ಮೂಲನೆಲೆಯಾದ ಕಾರಣ, ಅಂಗವು ಲಿಂಗದಲ್ಲಿ ಬೆರೆಯುವ ಕ್ರಿಯೆ ಮುಖ್ಯ. ಅದಕ್ಕಾಗಿಯೇ ಲಿಂಗಾಯತ ಧರ್ಮದಲ್ಲಿ ಪಂಚಭೂತಗಳಲ್ಲಿ ವಿಲೀನವಾದರು ಎನ್ನದೆ ಲಿಂಗೈಕ್ಯರಾದರು ಎನ್ನುವುದು. ನಾಸ್ತಿಕವಾದವದ ಚಾರ್ವಾಕರು ಮತ್ತು ಮಾರ್ಕ್ಸ್‌ವಾದಿಗಳ ಪ್ರಕಾರ ಆತ್ಮ ಎನ್ನುವ ಅಭೌತಿಕ ಚೈತನ್ಯವೇ ಸುಳ್ಳು ಎಂದಾಗ ಮಾತ್ರ ಶರೀರವು ಪಂಚಭೂತಗಳಲ್ಲಿ ಲೀನವಾಗುವುದು

ಅಂತಿಮ ಕ್ರಿಯೆ. ಸೇಶ್ವರವಾದಿ ಧರ್ಮಗಳಲ್ಲಿ ಶರೀರ ದೃಷ್ಟಿಕೋನದಿಂದ ಪಂಚಭೂತಗಳಲ್ಲಿ ಲೀನವಾಗುವುದು ಸತ್ಯವಾದರೂ ಆತ್ಮದ ದೃಷ್ಟಿಯಿಂದ ದೇವನಲ್ಲಿ ಒಂದಾಗುವುದು ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಇದನ್ನು ಚೆನ್ನಬಸವಣ್ಣನವರು ಅದೆಷ್ಟು ಸುಂದರವಾಗಿ ಹೇಳಿದ್ದಾರೆ ನೋಡಿರಿ.

1. ಎಲೆ ಶಿವನೆ, ನಿಮ್ಮಲ್ಲಿ ಸಾಲವ ಕೊಂಡು, ನಿಮ್ಮ
ಶಿವಪುರವ ಹೊಗುವನಲ್ಲ!
ಪೃಥ್ವಿಯ ಸಾಲಕ್ಕೆ ಪೃಥ್ವಿಯನೆ ಕೊಟ್ಟು,
ಅಪ್ಪುವಿನ ಸಾಲಕ್ಕೆ ಅಪ್ಪುವನೆ ಕೊಟ್ಟು,
ತೇಜದ ಸಾಲಕ್ಕೆ ತೇಜವನೆ ಕೊಟ್ಟು,
ವಾಯುವಿನ ಸಾಲಕ್ಕೆ ವಾಯುವನೆ ಕೊಟ್ಟು,
ಆಕಾಶದ ಸಾಲಕ್ಕೆ ಆಕಾಶವನೆ ಕೊಟ್ಟು,
ಇನ್ನಾರಿಗೆ ಪ್ರಸಾದವ ಕೊಡಲಿಕ್ಕಿ ಲಿಲ್ಲವೆಂದು
ಕೂಡಲ ಚನ್ನಸಂಗಮದೇವರಲ್ಲಿ ಹೂಣಿಹೊಕ್ಕ ಶರಣಂಗೆ
ನಮೋ ನಮೋ ನಮೋ ಎಂಬೆ. (ಚ.ಬ.ವ-೧೨೪೮)

2. ಭೂ ತೋಯ ಪಾವಕ ಸಮೀರಣ ಅಂಬರಾದಿಗಳೆಲ್ಲ
ಆಧಿಯಾಧಾರದ ಪರಮಾತ್ಮ ಲಿಂಗದಲ್ಲಿ
ಆದಿ ಮಧ್ಯ ಅವಸಾನವನರಿಯದ
ಆಗಮ ವೇದಾದಿ ಸಕಲ ಶಾಸ್ತ್ರಪ್ರಮಾಣರು
ಅದನಂತಿಂತೆಂದುಪಮಿಸಲಿಲ್ಲ,
ಮಹಾಂತ ಲಿಂಗದೇವನ. -ಬ.ವ.ದೀ-೯೪೫

ವೇದಾದಿ ಸಕಲ ಶಾಸ್ತ್ರಪ್ರಮಾಣರು ಆದಿಮಧ್ಯ ಅವಸಾನವನ್ನೇ ಅರಿಯರು ಎಂದು ಧರ್ಮಪಿತ ಬಸವಣ್ಣನವರು ಕಟುವಾಗಿ ಖಂಡಿಸಿದ್ದಾರೆ.

"ಸ್ವಾಮಿಗಳು ವಿಧಿವಶರಾದರು" ಎಂಬ ಪದ ಅಜ್ಞಾನಯುಕ್ತವಾದುದು; ವೈದಿಕ ಧರ್ಮ ದ ಪರಿಭಾಷೆಯೇ ಹಾಗಿದೆಯೊ? ಅಥವಾ ಪ್ರಕಟಣೆ ನೀಡಿದವರು ಅಜ್ಞಾನಿಗಳೋ? ಅಥವಾ ವರದಿಗಾರರು ಬೌದ್ಧಿಕವಾಗಿ, ಸೈದ್ಧಾಂತಿಕವಾಗಿ ಕುಬ್ಜರೋ ಎಂದು ಅಚ್ಚರಿಯಾಗುತ್ತಿದೆ.

ಸಾಮಾನ್ಯ ಭಕ್ತರೇ ದೇವನಿಗೆ ಶರಣಾಗಿ ವಿಧಿಯನ್ನು ಗೆಲ್ಲುತ್ತಾರೆ. ಇನ್ನು ಸ್ವಾಮಿ, ಸನ್ಯಾಸಿಗಳು ವಿಧಿಯ ಪಾಲಿಗೆ ಆಹಾರವಾಗಲುಂಟೆ?

ಕುಲ ಮದವಳಿಯದನ್ನಕ್ಕ ಶರಣನಾಗಲೇಕೆ?
ವಿಧಿ ವಶ ಬಿಡದನ್ನಕ್ಕ ಭಕ್ತನಾಗಲೇಕೆ?.........
ಹೆಪ್ಪನೆರೆವ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು
ಲಿಂಗದೇವಾ, ನಿಮ್ಮ ಶರಣರು.
-ಬ.ವ.ದೀ -864

ಅದಕ್ಕೆ ನಾನು ಒಂದು ಗೀತೆಯಲ್ಲಿ ಹೀಗೆ ಹಾಡಿದ್ದೇನೆ:

ತೂಗುವ ಕೈಯದು ವಿಧಿಯದ್ದಾಗಿರೆ ಬಾಳಿನ ಬವಣೆ ತಪ್ಪದು ನೋಡು ದೇವನ ಹಸ್ತವು ತೂಗುತಲಿರಲು ಮುಕುತಿಯ ಸಂತಸ ನಿನ್ನದು ನೋಡು॥

ಪಾಪ - ಪುಣ್ಯಗಳ ಸೀಮೆಯಲ್ಲಿದ್ದವರಿಗೆ ಮಾತ್ರ ವಿಧಿಯ ಆಟ ನಡೆಯುತ್ತದೆ. ಅದನ್ನು ದಾಟಿದವರು ವಿಧಿಯ ಹಿಡಿತದಿಂದ ಪಾರಾಗಿ ದೇವನ ಹಸ್ತದ ಸೂತ್ರಾಧಾರಿತರಾಗಿರುತ್ತಾರೆ. -ಮಾತಾಜಿ

ಸಮಸ್ಯೆ - ? ಸಮಾಧಾನ !

-ಡಿ.ಗುರುಮಲ್ಲಪ್ಪ, ದೊಡ್ಡಪುರ, ತಾಳವಾಡಿ

? ಬಸವಣ್ಣನವರಿಗೆ ಒಬ್ಬಳೇ ಪತ್ನಿ ನೀಲಗಂಗಾ ಎಂದಿದ್ದೀರಿ. ಉಳಿದೆಲ್ಲರ ಸಾಹಿತ್ಯದಲ್ಲಿ ಉದಾ. ಶ್ರೀತಿಪ್ಪೇರುದ್ರ ಸ್ವಾಮಿಯವರ ಕರ್ತಾರನ ಕಮ್ಮಟ, ಅರಿವು-ಆಚಾರ ಗ್ರಂಥ ಎಲ್ಲೆಡೆ ಇಬ್ಬರೆಂದೇ ಹೇಳಲಾಗಿದೆ. ತಾವು ಸಹಿತ ಕ್ರಾಂತಿಯೋಗಿ ಬಸವಣ್ಣದಲ್ಲಿ ಇಬ್ಬರನ್ನು ಚಿತ್ರಿಸಿದ್ದೀರಿ. ಈಗ ಹೀಗೆ ಒಬ್ಬಳೇ ಎಂದರೆ ಹೇಳುವುದೇಕೆ ?

★ 1987ರಲ್ಲಿ ಬಹಳಷ್ಟು ವಿವರಗಳು, ದಾಖಲೆಗಳು ಸಿಕ್ಕಿದ ಮೇಲೆ ಅತ್ಯಂತ ನಿಖರವಾಗಿ ಧರ್ಮಪಿತ ಬಸವಣ್ಣನವರಿಗೆ ಇದ್ದುದು ಒಬ್ಬಳೇ ಧರ್ಮಪತ್ನಿ ನೀಲಗಂಗಾ ಎಂದು ಹೇಳಲು ಆರಂಭಿಸಿದೆವು. ಅದಕ್ಕೆ ಮೊದಲು ಆ ಸಾಹಿತಿ ಈ ಸಾಹಿತಿ, ಆ ಕವಿ ಈ ಕವಿ ಹೇಳಿದ್ದನ್ನು ಗಿಳಿಯಂತೆ ಪುನರುಚ್ಚರಿಸುತ್ತಿದ್ದೆವು. ಲಿಂ॥ಶರಣ. ಹೆಚ್.ದೇವೀರಪ್ಪನವರು ಮಾತ್ರ ಈ ವಿಚಾರಕ್ಕೆ ಬದ್ಧರಾಗಿದ್ದರು. ಶ್ರೀ ತಿಪ್ಪೇರುದ್ರ ಸ್ವಾಮಿಯವರು ಪುಸ್ತಕ ಬರೆಯುವಾಗ ಇಷ್ಟು ಮಾಹಿತಿ ಲಭ್ಯವಿರಲಿಲ್ಲ. ಒಂದು ವೇಳೆ ಮಾಹಿತಿ ಲಭ್ಯವಾಗಿ ಸತ್ಯವೆಂದು ಪಟ್ಟರೂ ಸಹ ಅನೇಕ ಬರಹಗಾರರು ಜನರ ನಂಬಿಕೆಯಲ್ಲಿ ಸ್ಥಿರಗೊಂಡ ವಿಚಾರಕ್ಕೆ ವಿರುದ್ಧವಾಗಿ ಹೇಳುವ ಧೈರ್ಯ ಹೊಂದಿರುವುದಿಲ್ಲ. ಇನ್ನು ಕೆಲವರು ನಾವು ಏನು ಹೇಳುತ್ತೇವೋ ಅದಕ್ಕೆ ಬೇರೆಯಾದ ಅಥವಾ ವಿರುದ್ಧವಾದ ವಿಚಾರವನ್ನು ಪ್ರತಿಪಾದಿಸುವುದರಲ್ಲೇ ಸಂತೋಷ ಕಾಣುತ್ತಾರೆ.

ಒಂದು ಮಗು ಹುಟ್ಟಿದಾಗ ಮೀಸೆ ಇರದು; ನಂತರ ಯುವಕನಾದಾಗ ಮೀಸೆ ಬೆಳೆಯುತ್ತದೆ. ಆಗಿರಲಿಲ್ಲ ಈಗ ಇದೆ; ಆದ್ದರಿಂದ ಈತ ಆ ಮಗುವು ಅಲ್ಲ ಎಂಬುದು ಎಷ್ಟು ಹಾಸ್ಯಾಸ್ಪದವೋ ಹಾಗೆ ಸಂಶೋಧನೆ ಸಹ; ಅದು ಸತ್ಯ ಶೋಧನೆ ಆಗಿ ಹೊಸಹೊಸ ಸಂಗತಿಗಳನ್ನು ತೆರೆದು ಇಡುತ್ತದೆ.

? ನಾನು 108 ಮಣಿಗಳ ಒಂದು ರುದ್ರಾಕ್ಷಿ ಸರ ಕೊಂಡೆ. ಕತ್ತಿನಲ್ಲಿ ಹಾಕಿದಾಗ ಹೊಕ್ಕುಳ ಕೆಳಗೆ ಬಂದಿತು. ಇದು ಸರಿಯಲ್ಲ ಎನಿಸಿ 68 ಮಾತ್ರ ಧರಿಸಿದ್ದೇನೆ. ಸರಿಯೇ, ತಪ್ಪೇ?

★ ರುದ್ರಾಕ್ಷಿಯ ಉದ್ದೇಶ ಸಮ್ಯಕ್ ದೃಷ್ಟಿ ಅಳವಡಿಸಿಕೊಳ್ಳುವುದು; ಸಾಂಕೇತಿಕವಾಗಿ ಬಹಿರಂಗದಲ್ಲಿ ಧರಿಸುತ್ತೇವೆ. ಸಾಂಪ್ರದಾಯಿಕವಾಗಿ 108 ಮಣಿ + 1 ಶಿಖಾಮಣಿ ಧರಿಸಿ, ಜಪ ಮಾಡಲಾಗುವುದು. ಆದ್ದರಿಂದ ನೀವು 54 +1ಶಿಖಾಮಣಿ ಪೋಣಿಸಿಕೊಳ್ಳಿರಿ. ಎರಡು ಸುತ್ತಿಗೆ 108 ಜಪ ಮಾಡಲು ಅನುಕೂಲವಾಗುತ್ತದೆ.

- ಡಿ. ಸಾವಿತ್ರಿ, ರಾ.ಬ.ದಳ, ರಾಯಚೂರು.

? ಅಹಂಗ್ರಹೋಪಾಸನೆ ಎಂದರೇನು? ಇಷ್ಟಲಿಂಗ ಪೂಜೆ ಅಹಂಗ್ರಹೋಪಾಸನೆ ಹೇಗೆ?

★ ಪ್ರತೀಕೋಪಾಸನೆ ಎಂದರೆ ತನ್ನಿಂದ ಹೊರತಾದ ಇನ್ನೊಂದು ವಸ್ತುವಿನ ಪೂಜೆ ; ಅಹಂಗ್ರಹೋಪಾಸನೆ ಎಂದರೆ ತನ್ನ(ಆತ್ಮ) ಪೂಜೆ ಇಷ್ಟಲಿಂಗದ ಒಳಗಿರುವ ಹುಟ್ಟುಲಿಂಗ ತನ್ನ ಅರ್ಥಾತ್ ಜೀವಾತ್ಮನ ಸಂಕೇತ. ಹೊರಗಿನ ಕಂಥೆ ಬ್ರಹ್ಮಾಂಡಗತ ಚೈತನ್ಯವಾದ ಪರಮಾತ್ಮನ ಸಂಕೇತ. ಪರಮಾತ್ಮನು ಜೀವಾತ್ಮನ ರೂಪದಲ್ಲಿ ತನ್ನಲ್ಲೇ ಚುಳುಳಿಕಾಗಿ ನೆಲೆಸಿದ್ದಾನೆ. ಆದ್ದರಿಂದ ಇಷ್ಟಲಿಂಗಪೂಜೆ ಯಾವುದೇ ಹೊರಗಿನ ವ್ಯಕ್ತಿಯ ಪೂಜೆಯಲ್ಲ. ತನ್ನ ಹೆಬ್ಬೆಟ್ಟಿನ ಕಡೆಗೆ ಮುಖಮಾಡಿ ಇಟ್ಟುಕೊಳ್ಳಲಾಗುವುದು. ಸ್ಥಾವರ ಲಿಂಗದ ಜಲಹರಿ ನಮ್ಮ ವಿರುದ್ಧವಾಗಿದ್ದರೆ, ಹುಟ್ಟುಲಿಂಗದ ಜಲಹರಿ ನಮ್ಮನ್ನು ಹೋಲುವಂತೆ ಇರುತ್ತದೆ.

-ಅನ್ನಪೂರ್ಣ ಮಾಸ್ತಮರಡಿ, ಗೋಕಾಕ್

? ಲಿಂಗಾಯತರಲ್ಲಿ ಪಂಚಮಸಾಲಿ ಅಂದರೇನು; ಅದರ ಉದಯ ಹೇಗೆ ? ಉಳಿದವರಿಗಿಂತ ತಾವು ಶ್ರೇಷ್ಠ ಎನ್ನುತ್ತಾರಲ್ಲ ಏಕೆ ?

★ ಪ್ರತಿಯೊಂದು ಜಾತಿ, ಪಂಗಡದ ಮೂಲ ಹುಡುಕುವುದು ಕಷ್ಟಸಾಧ್ಯ ಸ್ವಯಂಭುವಾಗಮದ ಪ್ರಸ್ತಾಪ ಮಾಡಿ ಪಂಚವಕ್ತ್ರ ಗಣೇಶ್ವರನ ಈಶಾನ್ಯ ಮುಖ(ಪಂಚಮ)ದಿಂದ ಹುಟ್ಟಿದವರು ಪಂಚಮಸಾಲಿಯವರು ಎಂದು ಕೆಲವರು ಪೌರಾಣಿಕವಾಗಿ ಹೇಳಲು ಯತ್ನಿಸುತ್ತಾರೆ. ಪಂಚಮಸಾಲಿಯವರು ಹೆಚ್ಚಾಗಿ ಭೂಮಾಲಿಕರು; ಉತ್ತರ ಕರ್ನಾಟಕದಲ್ಲಿ ಊರಿನ ಗೌಡರುಗಳೆಲ್ಲ ಸಾಮಾನ್ಯವಾಗಿ ಪಂಚಮ ಸಾಲಿಯವರು. ಭೂ ಕಾರ್ಮಿಕ (ಕೂಲಿಯವನು)ನಿಗಿಂತ ಭೂ ಮಾಲಿಕ, ಬಣಜಿಗರು-ವ್ಯಾಪಾರ ಮಾಡುವವರು, ಅಯ್ಯನವರು-ಪೂಜಾರಿಕೆ/ ಪೌರೋಹಿತ್ಯ ಮಾಡುವವರು ಕೈ - ಮೈ ಕೊಳೆಯಾಗದಂತೆ ಇರುವವರು. ಹೀಗಾಗಿ ಈ ಮೂವರು ತಾವೇ ಶ್ರೇಷ್ಠ ಎಂದು ಹೇಳಿಕೊಳ್ಳುತ್ತಾ ಬಂದಿದ್ದಾರೆ ಅಷ್ಟೆ; ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಶೂದ್ರರಿಗಿಂತ ಶ್ರೇಷ್ಠ ಎಂದುಕೊಂಡಂತೆ

? ಲಿಂಗಾಯತರೇ ಆಗಿರುವ ವೃತ್ತಿ ನಿರತ ಕುಟುಂಬಗಳು ಹಡಪದ, ಕುಮ್ಮಾರ, ಕುಂಬಾರ, ಬಣಗಾರ, ಜಾಡರ ಮುಂತಾದುವು ಪಂಚಮಸಾಲಿಯಲ್ಲಿ ಬರುತ್ತವೆಯೋ ಅಥವಾ ಬೇರೆಯೋ ? ಅಲ್ಲದಿದ್ದರೆ ಯಾವುದರಲ್ಲಿ ಬರುತ್ತವೆ. ?

★ ಉತ್ತರ ಕರ್ನಾಟಕದಲ್ಲಿ ಪಂಚಮಸಾಲಿ ಎನ್ನುತ್ತಾರೆ, ದಕ್ಷಿಣ ಕರ್ನಾಟಕದಲ್ಲಿ ಪಂಚ ಆಚಾರದವರು ಎನ್ನುತ್ತಾರೆ. ಸಾಂಪ್ರದಾಯಿಕ ವರ್ಣವ್ಯವಸ್ಥೆಯಲ್ಲಿ ಕಾಯದ ಪರಿಶ್ರಮ ಮಾಡುವವರನ್ನೆಲ್ಲ ಶೂದ್ರ ಎನ್ನಲಾಗುತ್ತಿತ್ತು. ಉದ್ಯೋಗಗಳ ಆಧಾರದ ಮೇಲೆ ಈ ಜಾತಿ ಪಂಗಡ ಬಂದವು. ಅವರುಗಳೆಲ್ಲರು ಬಸವಣ್ಣನವರ ಕೃಪೆಯಿಂದ ಲಿಂಗಾಯತ ಧರ್ಮ ಸ್ವೀಕರಿಸಿದ್ದಾರೆ. ಆದ್ದರಿಂದ ಎಲ್ಲರನ್ನು ಲಿಂಗಾಯತ ಧರ್ಮೀಯರು ಎನ್ನಬೇಕು ಒಳಜಾತಿಗಳನ್ನು ಹುಡುಕಬಾರದು; ಅವುಗಳ ಆಧಾರವಿಡಿದು ಮೇಲು ಕೀಳು ಎಂದು ಭೇದವೆಣಿಸಬಾರದು. ಹಡಪದ, ಕುಂಬಾರ ಇತ್ಯಾದಿ ಪಂಚಮಶಾಲಿ ಪಂಗಡದಿಂದ ಬೇರೆ.

-ಮನೋಹರ ಬೀಳಗಿ, ಹುಬ್ಬಳ್ಳಿ

? ಕಾಂಗ್ರೆಸ್ ಮತ್ತು ಜೆ.ಡಿ.ಎಸ್ ಸಮ್ಮಿಶ್ರ ಸರ್ಕಾರವಿದೆ. ಇಬ್ಬರೂ ಬಹಿರಂಗದ ವೇದಿಕೆ ಮೇಲೆ ಪರಸ್ಪರ ದೂಷಿಸಿಕೊಳ್ಳುತ್ತಾರೆ. ಮತ್ತೊಮ್ಮೆ ತಾವು ಸೌಹಾರ್ದದಿಂದ ಇದ್ದೇವೆ ಎನ್ನುತ್ತಾರೆ. ಸರ್ಕಾರ ಉರುಳುತ್ತೆ ಎಂದು ಜೆ.ಡಿ.ಎಸ್ ನವರು ಅನ್ನುತ್ತಾರೆ. ಇಲ್ಲ, ಸುಭದ್ರವಾಗಿದೆ ಎಂದು ಕಾಂಗ್ರೆಸ್ಸಿಗರು ಹೇಳುತ್ತಾರೆ. ಇಂಥ ನಾಯಕರಿಂದ ಸಮಾಜ ಏನು ಪಾಠ ಕಲಿಯಬೇಕು ?

★ ಕಾಂಗ್ರೆಸ್ ಹಾಗೂ ಸಮ್ಮಿಶ್ರ ಸರ್ಕಾರದ ಸಾಂಗತ್ಯ ಜಗಳಗಂಟ ದಂಪತಿಗಳಿಗೆ ಉತ್ತಮ ಪಾಠ ನೀಡುತ್ತಿದೆ. ಜಗಳವಾಡುತ್ತಲೇ ಕೂಡಿ ಬದುಕಬಹುದು; ಕೂದಿದ್ದೂ ಜಗಳವಾಡಬಹುದು ಎಂಬ ಬಹಳ ಮಹತ್ವಪೂರ್ಣವಾದ ಪಾಠವನ್ನು ಕಲಿಸುತ್ತಿದ್ದಾರೆ, ಸಮ್ಮಿಶ್ರ ಸರ್ಕಾರದ ಅಧ್ವರ್ಯುಗಳು. ಕೆಲವು ವರ್ಷಗಳ ಹಿಂದೆ ನಮ್ಮ ಬಸವ ಮಂಟಪಕ್ಕೆ ತುಸುದೂರದಲ್ಲಿ ಒಂದು ಕುಟುಂಬವಿತ್ತು. ನೋಡಲು ಬಹಳ ಸುಸಂಸ್ಕೃತರಂತೆ ಕಾಣುತ್ತಿದ್ದರು. ಗಂಡ-ಹೆಂಡತಿ ಇಬ್ಬರೂ ವಿದ್ಯಾವಂತರು. ರಾತ್ರಿ 11ರ ಮೇಲೆ ಮನೆಗೆ ಕುಡಿದು ಬರುತ್ತಿದ್ದ ಗಂಡ ಹೆಂಡತಿಯನ್ನು ದನವನ್ನು ಬಡಿದಂತೆ ಬಡಿಯುತ್ತಿದ್ದ. ಆಕೆಯೋ ಭಯಂಕರವಾಗಿ ಚೀರುತ್ತಿದ್ದಳು. ಸುತ್ತು ಮುತ್ತಲಿನವರಿಗೆ ನಿದ್ದೆ ಇರುತ್ತಿರಲಿಲ್ಲ. ಬೆಳಿಗ್ಗೆ 8-9 ಗಂಟೆಗೆ ಅತ್ಯಂತ ಠಾಕು ಠೀಕಾಗಿ ಡ್ರೆಸ್ ಮಾಡಿಕೊಂಡು, ಹೆಂಡತಿಯಂತೂ ಫ್ಯಾಷನ್ ಗೊಂಬೆ- ಇಬ್ಬರೂ ಕುಲು ಕುಲು ನಗುತ್ತ ಮನೆಯಿಂದ ಹೊರಡುತ್ತಿದ್ದರು. ಆ ಮನೆಯನ್ನು ಮಾರಿಕೊಂಡು ಉಭಯತರೂ ಹೋದರು. ಆ ದಂಪತಿಗಳ ರಾತ್ರಿ ಜಗಳ; ಹಗಲಿನ ನಗು ಇನ್ನೂ ನಮಗೆ ಕಣ್ಣಿಗೆ ಕಟ್ಟಿದಂತಿದ್ದು ಕಾಂಗ್ರೆಸ್ ಪತಿ-ಜೆ.ಡಿ.ಎಸ್ ಸತಿಯ ದಾಂಪತ್ಯ ನೋಡಿದಾಗ ಆ ದಂಪತಿಗಳು ನೆನಪಾಗುತ್ತಲೇ ಇರುತ್ತಾರೆ.

(21ನೇ ಪುಟ ನೋಡಿ)

ದೆಹಲಿಯ ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ ಕಳಕಳಿಯ ಸೂಚನೆ

ಭಾರತದ ರಾಜಧಾನಿ ದೆಹಲಿಯ ದರಿಯಾಗಂಜ್ ಪ್ರದೇಶದಲ್ಲಿ ಮಹಾವೀರ ವಾಟಿಕಾ(ಎಂ.ಸಿ.ಡಿ) ಸಮುದಾಯ ಭವನದಲ್ಲಿ 2005ರ ಅಕ್ಟೋಬರ್ 22,23 ಮತ್ತು 24 ರಂದು ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವನ್ನು ಏರ್ಪಡಿಸಲಾಗಿದೆಯಷ್ಟೆ ಪ್ರತಿನಿಧಿಗಳ ಊಟ-ವಸತಿ-ಸಮ್ಮೇಳನ ಶುಲ್ಕ ಸೇರಿ 600(ಆರು ನೂರು) ರೂ ನಿಗದಿ ಪಡಿಸಲಾಗಿದೆ.

1. ಪ್ರತಿಯೊಬ್ಬ ಪ್ರತಿನಿಧಿಯೂ ಕಡ್ಡಾಯವಾಗಿ 600ರೂಗಳ ಶುಲ್ಕವನ್ನು ಸಂದಾಯ ಮಾಡಿ ಗುರುತಿನ ಚೀಟಿ ಮತ್ತು ಬ್ಯಾಡ್ಜನ್ನು ಪಡೆಯಲೇಬೇಕು.

2. ಸಮ್ಮೇಳನ ಶುಲ್ಕ ಕಟ್ಟದವರಿಗೆ ಗುರುತಿನ ಚೀಟಿ-ಬ್ಯಾಡ್ಜ್ ಕೊಡಲಾಗುವುದಿಲ್ಲ. ಮತ್ತು ಅವರಿಗೆ ಊಟ-ವಸತಿಗಳ ವ್ಯವಸ್ಥೆ ಮಾಡುವ ಜವಾಬ್ದಾರಿ ಸಮ್ಮೇಳನ ಸಮಿತಿಯದಾಗಿರುವುದಿಲ್ಲ. ತಮ್ಮ ತಮ್ಮ ಊಟ ವಸತಿಗಳ ವ್ಯವಸ್ಥೆಯನ್ನು ಅವರೇ ಪ್ರತ್ಯೇಕವಾಗಿ ಮಾಡಿಕೊಳ್ಳಬೇಕು.

3. ಶರಣ ಮೇಳ ಮತ್ತು ಕಲ್ಯಾಣ ಪರ್ವಗಳಲ್ಲಿ ಇಂಥ ಕಡ್ಡಾಯತೆಯನ್ನು ವಿಧಿಸಿರುವುದಿಲ್ಲ. ಅವು ಬಸವ ಧರ್ಮಪೀಠದ ಸ್ಥಳಗಳಲ್ಲೇ ನಡೆಯುವುದರಿಂದ ಹೇಗೋ ನಿಭಾಯಿಸಲಾಗುವುದು. ದೆಹಲಿ ಸಮ್ಮೇಳನಕ್ಕಾಗಿ ಪೂರ್ವಭಾವಿಯಾಗಿ ಕಾಣಿಕೆ ಸಂಗ್ರಹವನ್ನು ಸಹ ಮಾಡಿಲ್ಲ. ಹೀಗಾಗಿ ಎಲ್ಲ ಖರ್ಚು ವೆಚ್ಚಗಳನ್ನು ಪ್ರತಿನಿಧಿ ಶುಲ್ಕ ಮತ್ತು ಸದ್ಭಕ್ತರು ಸ್ವ ಇಚ್ಛೆಯಿಂದ ಕೊಡುವ ಕಾಣಿಕೆಯಿಂದಲೇ ಮಾಡಬೇಕಾಗುತ್ತದೆ. ಆದ್ದರಿಂದ ಪ್ರತಿನಿಧಿ ಶುಲ್ಕವನ್ನು ಕಡ್ಡಾಯಗೊಳಿಸಲಾಗಿದೆ.

4. ಹಿಂದಿನ ವರ್ಷಗಳಲ್ಲಿ ನಡೆದ ಸಮ್ಮೇಳನಗಳ ಸಮಯದಲ್ಲಿ ಕೆಲವು ಮುಖಂಡರು ಹಣ ಸಂಗ್ರಹ ಮಾಡಿಯೂ ಸಂಸ್ಥೆಗೆ ಕೊಡದೆ ದುರುಪಯೋಗ ಮಾಡಿಕೊಂಡುದು ಮನಸ್ಸಿಗೆ ತುಂಬಾ ವ್ಯಥೆಯನ್ನು ಉಂಟು ಮಾಡಿದ್ದರಿಂದ ಪ್ರತಿ ವರ್ಷವೂ ಒಂದೊಂದು ರಾಜ್ಯದಲ್ಲಿ ಸಮ್ಮೇಳನ ಮಾಡಬೇಕೆಂಬ ಯೋಜನೆಯನ್ನು ಕೈಬಿಟ್ಟೆವು. ಅವರು ಜನರಿಂದ ಕಡ್ಡಾಯವಾಗಿ ವಸೂಲಿ ಮಾಡಿ 'ಅವರು ಬಡವರು ಕೊಟ್ಟಿಲ್ಲ' ಎಂದು ಸಬೂಬು ಹೇಳಿದ್ದರು. ಆದ್ದರಿಂದ ಪ್ರತಿನಿಧಿಗಳು ಶುಲ್ಕವನ್ನು ಕೊಟ್ಟಿದ್ದರೂ ಅದನ್ನು ಸಮಿತಿಗೆ ತಲುಪಿಸದ ಮುಂದಾಳುಗಳು ಇದ್ದರೆ ಅಂಥವರನ್ನು ಕರೆದುಕೊಂಡು ಬಂದು ಸ್ವಾಗತ ಕಾರ್ಯಾಲಯದಲ್ಲಿ ಭೇಟಿ ಮಾಡಿಸಬೇಕು.

5. ಪ್ರತಿಯೊಬ್ಬರೂ ಸಹಕರಿಸಿ ಸಮ್ಮೇಳನದ ಯಶಸ್ಸಿಗೆ ಸಹಕರಿಸಬೇಕೆಂದು ಕೋರುತ್ತೇವೆ.

ಎಕ್ಸ್‌ಟ್ರಾ ವಸತಿ ವ್ಯವಸ್ಥೆ

1. ಯಾರಾದರೂ ಒಂದು ದಿವಸ ಮೊದಲೇ ಬರುವುದಿದ್ದರೆ ದೂರವಾಣಿ ಮೂಲಕ ತಿಳಿಸಬೇಕು. ಸಾಮಾನ್ಯ ಸಾಮೂಹಿಕ ವಸತಿ ಸ್ಥಳಗಳನ್ನು ಕಾಯ್ದಿರಿಸಲಾಗುವುದು. ಅಂದಿನ ಬಾಡಿಗೆ ಪ್ರತ್ಯೇಕವಾಗಿ ಕೊಡಬೇಕು. ಊಟದ ವ್ಯವಸ್ಥೆ ಅವರವರೇ ಮಾಡಿಕೊಳ್ಳಬೇಕು.

2. ಸಮ್ಮೇಳನ ಸಮಿತಿ ದಿ.21-10-2005 ರಿಂದ 25-10-2005ರ ಬೆಳಗಿನ 7ರವರೆಗೆ ಮಾತ್ರ ಕಾಯ್ದಿರಿಸಿದೆ.

ದಿ.25ರಂದು ಉಳಿದು, ದೆಹಲಿ ಸಂದರ್ಶನ ಮಾಡಬೇಕು ಎನ್ನುವವರಿಗಾಗಿ ಕೆಲವೊಂದು ಸಾಮೂಹಿಕ ವಸತಿ ಗೃಹಗಳನ್ನು ಕಾಯ್ದಿರಿಸಿ ಸಹಕರಿಸಬೇಕೆಂದು ಸಮಿತಿ ನಿರ್ಧರಿಸಿದೆ. ಅಂದಿನ ಬಾಡಿಗೆಯನ್ನು ಪ್ರತ್ಯೇಕವಾಗಿ ಕಟ್ಟಬೇಕು. ಊಟದ ವ್ಯವಸ್ಥೆ ಅವರವರೇ ಮಾಡಿಕೊಳ್ಳಬೇಕು. ತಮ್ಮ ವಾಸ್ತವದ ಅಗತ್ಯದ ಬಗ್ಗೆ ಮೊದಲೇ ತಿಳಿಸಬೇಕು.

ವ್ಯವಸ್ಥಾಪಕರು : ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ ಸಮಿತಿ
ಬಸವ ಮಂಟಪ, ರಾಜಾಜಿನಗರ, ಬೆಂಗಳೂರು.

||ಓಂ ಶ್ರೀ ಗುರು ಬಸವ ಲಿಂಗಾಯ ನಮಃ||

866666



ಭಾರತದ ರಾಜಧಾನಿ ದೆಹಲಿಯ ದರಿಯಾಗಂಜ್‌ದ
ಲಾಲ್ ಕಿಲ್ಲಾ ರಸ್ತೆಯಲ್ಲಿರುವ
ಮಹಾವೀರ ವಾಟಿಕಾ(ಎಂ.ಸಿ.ಡಿ) ಸಮುದಾಯ ಭವನದಲ್ಲಿ
2005ರ ಅಕ್ಟೋಬರ್ 22,23 ಮತ್ತು 24ರಂದು ನಡೆಯಲಿರುವ
ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ
ಪ್ರತಿನಿಧಿಯಾಗಿ ಭಾಗವಹಿಸಲು ಅರ್ಜಿ ಪತ್ರ

ಪೂಜ್ಯ ಸಂಘಟಕರೆ,

ಭಾರತದ ರಾಜಧಾನಿ ನವದೆಹಲಿಯಲ್ಲಿ 2005ರ ಅಕ್ಟೋಬರ್ 22, 23 ಮತ್ತು 24 ರಂದು ನಡೆಯಲಿರುವ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಲು ಉತ್ಸುಕನಾಗಿ/ಳಾಗಿದ್ದೇನೆ. ವಿವರಗಳು ಕೆಳಕಂಡಂತಿವೆ.

ಹೆಸರು - ಅಡ್ಡ ಹೆಸರು :

ವಿಳಾಸ :

ದೂರವಾಣಿ ಸಂಖ್ಯೆ :

ನಮ್ಮ ಕುಟುಂಬ / ಸಮೂಹದಿಂದ ಬರುವ ಜನರ ಸಂಖ್ಯೆ :

ಪ್ರತಿ ನಿಧಿ ಶುಲ್ಕ / ಕಾಣಿಕೆ: ಬ್ಯಾಂಕ್ ಡ್ರಾಫ್ಟ್ ನಂಬರ್ ಒಟ್ಟು ಮೊತ್ತ :

ಸಾಮೂಹಿಕ ವಸತಿ ಸಾಕೋ? ಸಾಕು ☐
ವಿಶೇಷ ಕೋಣೆ ವ್ಯವಸ್ಥೆ ಬೇಕೋ? ಬೇಕು ☐
ಅದಕ್ಕಾಗಿ ಪ್ರತ್ಯೇಕ ಹಣ ಕೊಡುವಿರಾ? ಅಹುದು ☐

ರೇಲ್ವೆ ರಿಸರ್ವೇಷನ್ (ಬೆಂಗಳೂರು) ನಾವೇ ಮಾಡಬೇಕೋ? ಅಹುದು ☐ ಇಲ್ಲ ☐
ಅದರ ಹಣ ಕಳಿಸಿರುವಿರಾ? ಬ್ಯಾಂಕ್ ಡ್ರಾಫ್ಟ್ ನಂಬರ್: ....

ಫೋಟೋ

1. ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಹಚ್ಚಿರಿ
2. ಒಂದು ಕುಟುಂಬದಿಂದ ಅಥವಾ ಶರಣ ಬಳಗದಿಂದ ಹೆಚ್ಚಿನ ಜನರು ಬರುತ್ತಿದ್ದರೆ ಅವರ ಭಾವಚಿತ್ರಗಳನ್ನು ಹೆಸರುಗಳೊಡನೆ ಒಂದೇ ಕವರಿನಲ್ಲಿ ಕಳಿಸಬಹುದು.

ಊರು: .... ದಿನಾಂಕ: .... ಸಹಿ: ....

ವಿಶೇಷ ಸೂಚನೆ : ಈ ಅರ್ಜಿ ಫಾರ್ಮಿನ ಜೆರಾಕ್ಸ್ ಪ್ರತಿ ತೆಗೆದು ತುಂಬಿ ಕಳಿಸಿರಿ. ವಿವರಗಳಿಗಾಗಿ ಕರಪತ್ರ ನಿಮ್ಮೊಡನೆ ಇಟ್ಟುಕೊಳ್ಳಿರಿ. ಒಂದು ಕುಟುಂಬದಿಂದ ಅಥವಾ ಸಮೂಹದಿಂದ ಹೆಚ್ಚಿನ ಜನರು ಬರುತ್ತಿದ್ದರೆ ಅರ್ಜಿ ಪತ್ರದ ಜೆರಾಕ್ಸ್ ಪ್ರತಿ ತೆಗೆದು ಎಲ್ಲರಿಗೂ ಒಂದೊಂದು ಅರ್ಜಿ ಪತ್ರ ಬರೆಯಬಹುದು. ಎಲ್ಲರ ಪ್ರತಿನಿಧಿ ಶುಲ್ಕ / ಕಾಣಿಕೆ ಸೇರಿಸಿ ಒಂದೇ ಬ್ಯಾಂಕ್ ಡ್ರಾಫ್ಟ್ ತೆಗೆಯಬಹುದು. ಅಥವಾ ಒಂದೇ ಅರ್ಜಿ ಬರೆದು, ಅದರಲ್ಲಿ ಭಾಗವಹಿಸುವ ಎಲ್ಲರ ಹೆಸರುಗಳನ್ನು ಬರೆದು, ಫೋಟೋಗಳನ್ನು ಒಂದೇ ಕವರಿನಲ್ಲಿಟ್ಟು, ಒಟ್ಟು ಹಣಕ್ಕೆ ಬ್ಯಾಂಕ್ ಡ್ರಾಫ್ಟ್ ಕಳಿಸಬಹುದು. ಬೆಂಗಳೂರು ವಿಳಾಸಕ್ಕೆ ಪತ್ರ ಕಳಿಸಬೇಕು. ಒಂದುವೇಳೆ ದೆಹಲಿಗೆ ಬಂದು ಪ್ರತಿನಿಧಿ ಶುಲ್ಕ ಕಟ್ಟುವುದಾದರೆ ಅದಕ್ಕೆ ಅನುಮತಿಯುಂಟು.

ವಿಶೇಷ ಸೂಚನೆ : ಪ್ರತಿನಿಧಿ ಶುಲ್ಕ ಕಟ್ಟದವರಿಗೆ ಊಟ-ವಸತಿಯ ವ್ಯವಸ್ಥೆ ಮಾಡುವ ಜವಾಬ್ದಾರಿ ಸಮಿತಿಯ ಮೇಲೆ ಇರುವುದಿಲ್ಲ.

Basava Mahamane Charitable Trust
63A/1, 3rd floor, Laxmi Market Munirka,
NEW DELHI - 110067
Mobile: (0)9891566242, (0)9891809708

Basava Mahamane Charitable Trust (R)
BASAVA MANTAPA
2035, 20th Main, Chord Road
2nd Block, Rajajinagar
BANGALORE-560010
Karnataka State, India
Ph : 080-23325335, 23322790



ಭಾರತದ ರಾಜಧಾನಿ ದಿಲ್ಲಿಯಲ್ಲಿ
2005, ಅಕ್ಟೋಬರ್ 22,23 ಮತ್ತು 24 ರಂದು
ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ
ಸ್ಥಳ : ದರಿಯಾಗಂಜ್ ಪ್ರದೇಶದಲ್ಲಿರುವ ಮಹಾವೀರ
ವಾಟಿಕಾ(ಎಂ.ಸಿ.ಡಿ) ಸಮುದಾಯ ಭವನದಲ್ಲಿ

ಕಾರ್ಯಕ್ರಮ ವಿವರ

ದಿ.22-10-2005	ಬೆಳಿಗ್ಗೆ	10-30ಕ್ಕೆ :	ಉದ್ಘಾಟನೆ
ಶನಿ(ಶರಣ)ವಾರ	ಮಧ್ಯಾಹ್ನ	3-30ಕ್ಕೆ :	ಚಿಂತನ ಗೋಷ್ಠಿ (ರಾಷ್ಟ್ರೀಯ ಬಸವ ದಳದವರಿಂದ)
	ಸಂಜೆ	6-00ಕ್ಕೆ :	ಧರ್ಮಚಿಂತನಗೋಷ್ಠಿ ವೀರ ವಿರಾಗಿಣಿ ಅಕ್ಕಮಹಾದೇವಿ ಕುರಿತು ವಿಶೇಷ ಚಿಂತನೆ
ದಿ.23-10-2005	ಬೆಳಿಗ್ಗೆ	10-30ಕ್ಕೆ :	ಶರಣ ಸಂಗಮ- ಸಾಮೂಹಿಕ ಪ್ರಾರ್ಥನೆ ಮತ್ತು ಸರ್ವಧರ್ಮ ಸಮಾವೇಶ
ಭಾನು(ದೇವ)ವಾರ	ಮಧ್ಯಾಹ್ನ	3-30ಕ್ಕೆ :	ಚಿಂತನಗೋಷ್ಠಿ (ರಾಷ್ಟ್ರೀಯ ಬಸವ ದಳದವರಿಂದ)
	ಸಂಜೆ	6-00ಕ್ಕೆ :	ಭಾರತೀಯ ಧರ್ಮಗಳ ಒಕ್ಕೂಟದ ಅಗತ್ಯ ಕುರಿತು ಚಿಂತನೆ.
ದಿ.24-10-2005	ಬೆಳಿಗ್ಗೆ	10-30ಕ್ಕೆ :	ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ಸಂಕಲ್ಪ
ಸೋಮ(ಶಿವ)ವಾರ	ಮಧ್ಯಾಹ್ನ	3-00ಕ್ಕೆ :	ಮೆರವಣಿಗೆ ಹಾಗೂ ಪಥ ಸಂಚಲನ
	ಸಂಜೆ	6-00ಕ್ಕೆ :	ಸಮಾರೋಪ ಸಮಾರಂಭ

(ಅಗತ್ಯಕ್ಕೆ ತಕ್ಕಂತೆ ಸ್ವಲ್ಪ ಮಾರ್ಪಾಡುಗಳು ಆಗಬಹುದು. ಅದನ್ನು ಆಹ್ವಾನ ಪತ್ರದಲ್ಲಿ ಮುದ್ರಿಸಲಾಗುವುದು.) ಕೆಲವೊಮ್ಮೆ ಅತಿಥಿಗಳ ಒಪ್ಪಿಗೆ ದೊರೆಯುವುದು ವಿಳಂಬವಾದಾಗ ಆಹ್ವಾನ ಪತ್ರ ಮುದ್ರಣ ತಡವಾಗಬಹುದು. ಆದ್ದರಿಂದ ಆಹ್ವಾನ ಪತ್ರಗಳನ್ನು ದೆಹಲಿಯಲ್ಲಿ ಪ್ರತಿನಿಧಿಗಳಿಗೆ ವಿತರಿಸಲಾಗುವುದು. ಐಡೆಂಟಟಿ ಕಾರ್ಡ್ ಅಂಚೆಯಲ್ಲಿ ಕಳಿಸಲಾಗುವುದು.

ದಾನಿಗಳಲ್ಲಿ ಮನವಿ

1. ದೆಹಲಿಯಲ್ಲಿ ಹಾಲ್ ಬಾಡಿಗೆ, ವಸತಿ ಗೃಹ ಬಾಡಿಗೆ, ಸಾಮಗ್ರಿಗಳ ಬೆಲೆ ವಿಪರೀತವಾದ್ದರಿಂದ ಪ್ರತಿನಿಧಿ ಶುಲ್ಕ 600 ರೂ ಸಾಲದು. ಇನ್ನೂ ಹೆಚ್ಚಿಗೆ ಇಡಿ ಎಂದು ಸಮಿತಿಯವರು ಆಗ್ರಹಿಸಿದರು. ಆದರೆ ಸಾಮಾನ್ಯರಿಗೆ ಇದೂ ಸಹ ಜಾಸ್ತಿ ಎಂದು ನಾನು ಜಾಸ್ತಿ ಮಾಡಲಿಲ್ಲ. ಆದ್ದರಿಂದ ಆರ್ಥಿಕ ಅನುಕೂಲತೆ ಇರುವವರು ಪ್ರತಿನಿಧಿ ಶುಲ್ಕದ ಜೊತೆಗೆ ಹೆಚ್ಚಿನ ಕಾಣಿಕೆ ನೀಡಬೇಕೆಂದು ಕೋರುತ್ತೇವೆ.
2. ಕಾರಣಾಂತರದಿಂದ ಸಮ್ಮೇಳನಕ್ಕೆ ಬರಲು ಆಗದವರು ಸಹ ಉದಾರವಾಗಿ ದೇಣಿಗೆ ನೀಡಿ ಸಮ್ಮೇಳನ ಯಶಸ್ಸಿಗೆ ಶುಭ ಹಾರೈಸಬೇಕೆಂದು ಕೋರುತ್ತೇವೆ.

-ಮಾತಾಜಿ

-ಕರುಣೇಶ ಮಹಾಗಾಂವ, ಬೆಂಗಳೂರು

? ಜಾತಿ ಪದ್ಧತಿ ತುಂಬಾ ಕೆಟ್ಟ ಪದ್ಧತಿ ಎಂದು ಬಸವಣ್ಣನವರು ಅದನ್ನು ವಿರೋಧಿಸಿದರು, ಇನ್ನು ಅನೇಕ ಸುಧಾರಕರು ಅದರ ಬಗ್ಗೆ ಸಾಕಷ್ಟು ಖಂಡನೆ ಮಾಡಿದ್ದಾರೆ. ಇದರಿಂದ ಒಂದೂ ಪ್ರಯೋಜನವಿಲ್ಲವೆ

★ ಕೆಟ್ಟು ನಿಂತ ಗಡಿಯಾರವೂ ಸಹ ದಿನಕ್ಕೆ ಎರಡು ಬಾರಿ ಸಮಯವನ್ನು ಸರಿಯಾಗಿ ತೋರಿಸುವಂತೆ ಒಂದೇ ಒಂದು ಪ್ರಯೋಜನಕಾರಿ ಅಂಶವನ್ನು ಗುರುತಿಸಬಹುದು. ಕೆಲವು ಕುಲ, ಜಾತಿ, ಜನಾಂಗದವರು ನೋಡಲು ಕುರೂಪಗಳಿರುತ್ತಾರೆ. ಜಾತಿಯ ಕಟ್ಟು ಬಿಟ್ಟು ಮದುವೆಯಾಗಬಾರದೆಂಬ ನಂಬಿಕೆಯ ಭಯದಿಂದ ಅವರವರ ಕುಲ ಜಾತಿಗಳಲ್ಲೇ ಮದುವೆಯಾಗುವುದರಿಂದ ಕೆಲವರು ಕುರೂಪಿಗಳಿಗೂ ಮದುವೆಯ ಭಾಗ್ಯ ಸಿಗುತ್ತದೆ!

-ಎಸ್.ಎನ್.ನೀಲಕಂಠ, ಕಾಯಕ ಕಂಪ್ಯೂಟರ್ಸ್, ಬೆಂಗಳೂರು.

?. ಪ್ರಜಾವಾಣಿ ಪತ್ರಿಕೆಯಲ್ಲಿ "ಭಾರತೀಯರಿಗೆ ಭಗವಂತರೆಷ್ಟು"ಎಂಬ ಒಂದು ಪುಸ್ತಕದ (ಲೇ : ಸದಾಶಿವ ಯೋಗಿ, ಪ್ರ:ನವ ಕರ್ನಾಟಕ ಪಬ್ಲಿಕೇಷನ್ಸ್) ವಿಮರ್ಶೆ ಬಂದಿದೆ. ನಿರ್ಭೀತ ವಿಚಾರ ಧಾರೆಯಿಂದ ಪುಸ್ತಕ ಬರೆಯಲಾಗಿದೆ. ಹಾಗೇಯೆ ವಿಮರ್ಶೆ ಸಹ ಮಾಲತಿ ಎಂಬುವವರು ಮಾಡಿದ್ದಾರೆ. ಬಹಳ ಜನರಿಗೆ ಹೊಸ ವಿಚಾರಧಾರೆ ಎನ್ನಿಸುತ್ತದೆ. ಲೇಖಕರು ಪುಸ್ತಕದ ಪುಟ 197 ಒಂದು ಮಾತು ಬರೆಯುತ್ತಾರೆ. "ನಮ್ಮಲ್ಲಿ ವೀರಶೈವರು ಬಸವಣ್ಣನನ್ನು ತಮ್ಮ ಜಾತಿಗೆ ಸೀಮಿತ ಪಡಿಸಿಕೊಂಡಿರುವುದರಿಂದಲೇ ಆತನ ವಚನಗಳನ್ನು ಮತ್ತೊಂದು ಜಾತಿಯವರೆನಿಸಿದ ಬ್ರಾಹ್ಮಣರು ಮರೆತಾದರೂ ಎಲ್ಲೂ ಹಾಡುವುದಿಲ್ಲ ಹಾಗೂ ಕೇಳಲು ಇಷ್ಟಪಡುವುದೂ ಇಲ್ಲ. ಕಾರಣ ವಿಶ್ವಮಾನವನಾದ ಆತನನ್ನು ಈ ವೀರಶೈವರು ತಮ್ಮ ಜಾತಿಯ ಸಂಕೋಲೆಗಳನ್ನು ತೊಡಿಸಿ ತಮ್ಮಲ್ಲೇ ಹಿಡಿದು ನಿಲ್ಲಿಸಿಕೊಂಡಿರುತಾರೆ." ಎಂದು ಬರೆದಿದ್ದಾರೆ. ಇದು ಸರಿಯೆ?

★ "ಭಾರತೀಯರಿಗೆ ಭಗವಂತರೆಷ್ಟು ?" ಎಂದು ಶ್ರೀ ಸದಾಶಿವಯೋಗಿ ಎಂಬುವವರು ಬರೆದ ಪುಸ್ತಕ ಕೆಲವರಿಗೆ ಹೊಸ ವಿಚಾರಧಾರೆ ಎನ್ನಿಸಬಹುದು. ಆದರೆ ನಮಗೆ ಏನೇನೂ ಹೊಸದಲ್ಲ. ಏಕೆಂದರೆ ಇಲ್ಲಿಯ ಎಲ್ಲ ವಿಮರ್ಶೆಯನ್ನು 12ನೇ ಶತಮಾನದಲ್ಲಿ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ಮಾಡಿಯೇ ಬಿಟ್ಟು ಜಾತಿ ವ್ಯವಸ್ಥೆ ಮೂಢ ನಂಬಿಕೆ, ಜ್ಯೋತಿಷ್ಯ, ಪಂಚಾಂಗ, ನವಗ್ರಹ, ಬಹುದೇವತೋಪಾಸನೆ- ಈ ಎಲ್ಲವನ್ನೂ ಖಂಡಿಸಿದ್ದಾರೆ. ಈ ಗ್ರಂಥ ಕರ್ತರು ರೋಗಗಳನ್ನು ಮಾತ್ರ ಪಟ್ಟಿ ಮಾಡಿದ್ದಾರೆ. ನಮ್ಮ ಶರಣರು ರೋಗಗಳನ್ನು ಗುರುತಿಸಿದ್ದಲ್ಲದೆ ಅದಕ್ಕೆ ಚಿಕಿತ್ಸೆಯನ್ನು ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳ ಮೂಲಕ ಮಾಡಿದ್ದಾರೆ.

ಬಹಳ ಜನರು ಒಂದು ಮಾತನ್ನು ಪುನಃ ಪುನಃ ಹೇಳುವುದುಂಟು. ಅದೇನೆಂದರೆ ವೀರಶೈವರು ಬಸವಣ್ಣನವರನ್ನು ತಮ್ಮ ಜಾತಿಗೆ ಸೀಮಿತಗೊಳಿಸಿಕೊಂಡಿದ್ದಾರೆ ಎಂಬುದು. ವೀರಶೈವರು ಅರ್ಥಾತ್ ಪಂಚಾಚಾರ್ಯ ವರ್ಗದವರು ಬಸವಣ್ಣನವರ ಕಡು ದ್ವೇಷಿಗಳು. ಇನ್ನು ವೀರಶೈವ/ ಲಿಂಗಾಯತ ಎಂಬ ಸಂಕರ (Hybrid)ತಳಿಗಳವರು ಬಸವಣ್ಣನವರ ಹೆಸರನ್ನು ಬಳಸುತಾರೆ; ಬಸವ ಜಯಂತಿ ಮಾಡಿ ನಾಲ್ಕು ಕಾಸು ಸಂಪಾದನೆ ಮಾಡಿಕೊಳ್ಳಬೇಕೆಂದು ಉತ್ಸವಗಳನ್ನು ಅದ್ದೂರಿಯಾಗಿ ಮಾಡುತ್ತಾರೆ; ಆದರೆ ಅವರ ತತ್ತ್ವಗಳು ಮಾತ್ರ ಬೇಕಾಗಿಲ್ಲ. ವಚನ ವಾಙ್ಮಯವನ್ನು ಸರಿಯಾಗಿ ಅರ್ಥ ಮಾಡಿಕೊಂಡ ಸಮರ್ಪಿತ ಚೇತನಗಳಾದ ಶುದ್ಧ ಲಿಂಗಾಯತರು ಮಾತ್ರ ಬಸವಣ್ಣನವರ ದಿವ್ಯ - ಭವ್ಯ ನಿಲುವು, ಮಾನವೀಯ ಕಳಕಳಿಯನ್ನು ಅರ್ಥಮಾಡಿಕೊಂಡಿದ್ದಾರೆ. ಆದ್ದರಿಂದ ಯಾರೇ ಆಗಲಿ "ವೀರಶೈವರು ತಮ್ಮ ಜಾತಿಗೆ ಬಸವಣ್ಣನವರನ್ನು ಕಟ್ಟಿಹಾಕಿಕೊಂಡಿದ್ದಾರೆ." ಎಂಬ ಮಿಥ್ಯಾರೋಪ ಬಿಡಬೇಕು.

ಈ ಕಾರಣಕ್ಕಾಗಿ ಬ್ರಾಹ್ಮಣರು ಬಸವಣ್ಣನವರ (ಅಥವಾ ಶರಣರ) ವಚನ ಹಾಡುವುದಿಲ್ಲ

ಎಂಬ ಪುಸ್ತಕ ಲೇಖಕರ ಸರ್ವೇಕ್ಷಣ(Survey) ನೋಡಿ ಅವರ ಇನ್ನಿತರ ವಿಮರ್ಶೆ ಬಗ್ಗೆಯೂ ಸಂದೇಹ ಪಡುವಂತಾಗುತ್ತಿದೆ. ಏಕೆಂದರೆ ಅ.ನ.ಕೃ, ಎಂ.ಆರ್.ಶ್ರೀ, ರಂಗನಾಥ ದಿವಾಕರರಂತಹ ಬ್ರಾಹ್ಮಣರು ವಚನ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅಪಾರ. "ಮೆಲ್ಲ ಮೆಲ್ಲನೆ ಬಂದು ಗಲ್ಲಕೆ ಮುದ್ದು ಕೊಟ್ಟು", "ಗೋಪಿಲೋಲ, ಮಖ್ಖನ ಚೋರ " "ರಾಧಾ ಲೋಲ" ಎಂಬ ಮಟ್ಟದ ಸಾಹಿತ್ಯವನ್ನು ನಾಲಿಗೆಯಿಂದ ಹಾಡುವ ಅಭಿರುಚಿ ಬೆಳೆಸಿಕೊಂಡು ಪುರೋಹಿತ ಶಾಹಿಯನ್ನು ಪ್ರತಿಪಾದಿಸುವ ಬ್ರಾಹ್ಮಣರು ಮಾತ್ರ ಪ್ರೌಢ ಮತ್ತು ವೈಚಾರಿಕ ನೆಲೆಯ, ಸಮತಾವಾದ ಬೋಧಿಸುವ "ಶೂದ್ರ ಸಾಹಿತ್ಯ"ವಾದ ವಚನ ಸಾಹಿತ್ಯ ಕಂಡರೆ, ಕೇಳಿದರೆ ಕಿಡಿಕಾರುತ್ತಾರೆ, ಕಿವಿ ಮುಚ್ಚಿಕೊಳ್ಳುತ್ತಾರೆ. ನಮ್ಮ ದೇಶದ ಆಂತರಿಕ ಸಾಮಾಜಿಕ ಸ್ಥಿತಿಗತಿಯಿಂದ ದಿಗಿಲುಗೊಂಡಿರುವ ವಿಚಾರಶೀಲ ಬ್ರಾಹ್ಮಣರು ಮತ್ತು ಎಲ್ಲ ಜಾತಿಜನಾಂಗದವರೂ ಬಸವಾದಿ ಪ್ರಮಥರನ್ನು, ವಚನ ಸಾಹಿತ್ಯವನ್ನು ಇಷ್ಟಪಡುತ್ತಾರೆ. ಆದರಿಷ್ಟೆ ಅವರುಗಳು ಬಸವಣ್ಣನವರಂತೆ ಧೈರ್ಯವಾಗಿ ಬ್ರಾಹ್ಮಣ್ಯವನ್ನು ಬಿಡಲಾರರು, ಬಸವ ತತ್ತ್ವವನ್ನು ಅಪ್ಪಿಕೊಳ್ಳಲಾರರು; ಹೊಯ್ದಾಡುತ್ತಿರುತ್ತಾರೆ.

-ಗೌರವ್ಮ್ಮ ದಾಸರಹಳ್ಳಿ, ಬೆಂಗಳೂರು

?ಬಸವಣ್ಣನವರು ಮುಕ್ತಾತ್ಮರು. ಆದರೆ ಕೆಲವು ಬಸವ ಭಕ್ತರು ಬಸವಣ್ಣನವರು ಪುನಃ ಅವತರಿಸಬೇಕೆಂದು ಸಂಕಲ್ಪ ಮಾಡಿ, ಪೂಜಿಸುತ್ತಾರೆ. ಇದು ಸರಿಯೇ ?

★ ತಪ್ಪು. ಉರಿಯುಂಡ ಕರ್ಪುರದಂತೆ ಲಿಂಗದೇವನಲ್ಲಿ ಲೀನವಾಗಿರುವ ಬಸವಣ್ಣನವರು ಪುನಃ ದೇಹಧಾರಿಯಾಗಿ ಬರರು ಮತ್ತು ಅವರು ಬರುವ ಅಗತ್ಯವೇ ಇಲ್ಲ. ಅವರುಗಳು ಕೊಟ್ಟ ಸಾಹಿತ್ಯವೇ ಮಾರ್ಗದರ್ಶನ ಮಾಡುವ ಬೆಳಕು ಆಗಿರುವಾಗ ನಾವು ಅವನ್ನು ತೆಗೆದುಕೊಂಡು ನಮ್ಮ ಬಾಳನ್ನು ರೂಪಿಸಿಕೊಳ್ಳಬೇಕು. ಅವರ ಆಶಯದಂತೆ ಸಮಾಜವನ್ನು ಕಟ್ಟಬೇಕು. ಪುನಃ ಪುನಃ ಬರಲೆಂದು ಸಂಕಲ್ಪ ಮಾಡಬಾರದು. ಆದರೆ ಅವರ ಅನುಗ್ರಹ (Grace) ಪಡೆಯಲು ಪ್ರಯತ್ನಿಸಬೇಕು; ಅದು ಸಾಧ್ಯವಿದೆ!

?. ಕುಟುಂಬದಲ್ಲಿ ಹಿರಿಯರು ಲಿಂಗೈಕ್ಯರಾದ ಮೇಲೆ ಅವರು ಅದೇ ಕುಟುಂಬದಲ್ಲಿ ಮೊಮ್ಮಕ್ಕಳಾಗಿ ಹುಟ್ಟಿ ಬರಲು ಸಾಧ್ಯವೇ, ಅವರ ಮಕ್ಕಳು ಸಂಕಲ್ಪ ಮಾಡಿಕೊಂಡರೆ ?

★ ಬಹಳ ಅಪರೂಪವಾಗಿ ಸಾಧ್ಯ. ಆತ್ಮವು ಬಹಳ ಕಾಲ ಅತಂತ್ರ ಸ್ಥಿತಿಯಲ್ಲಿರದೆ ತನ್ನ ಈ ಜನ್ಮದ ಕರ್ಮಕ್ಕೆ ತಕ್ಕಂತೆ ಇನ್ನೊಂದು ಗರ್ಭವನ್ನು ಆಯ್ಕೆ ಮಾಡಿಕೊಂಡು ಬೆಳೆಯುತ್ತದೆ. ಒಬ್ಬರ ಜೀವ ಮರಣಹೊಂದುವ ಸಮಯದಲ್ಲಿ ಅದೇ ಕುಟುಂಬದ ಪ್ರೀತಿ ಪಾತ್ರರಾದ ಮಗಳು, ಸೊಸೆ ಮುಂತಾದವರು ಗರ್ಭ ಧರಿಸಿದ ಸನ್ನಿವೇಶವಿದ್ದರೆ ಆ 'ಹಿರಿಯ' ಜೀವಕ್ಕೆ ಅವಕಾಶ ಸಿಗಬಹುದು. ಅಂಥ ಮಕ್ಕಳು ಜನ್ಮ ತಾಳಿದಾಗ ಬಾಲ್ಯದಲ್ಲಿ ಹಿಂದಿನ ಜನ್ಮದ ಕೆಲವು ಲಕ್ಷಣಗಳನ್ನು ತೋರಿದರೂ ದೊಡ್ಡವರಾದಂತೆ ಸಂಪೂರ್ಣ ಮರವೆಯಾಗುವುದು. ಹಿರಿಯರ ಬಗ್ಗೆ ಕಿರಿಯರಲ್ಲಿ ಆತ್ಮೀಯತೆಯಿಂದ ಕೂಡಿದ ಗೌರವ, ಸತ್ತ ಹಿರಿಯರಲ್ಲಿ ತಮ್ಮ ಕಿರಿಯರ ಬಗ್ಗೆ ವಿಪರೀತ ವ್ಯಾಮೋಹ ಇದ್ದಾಗ ಇದು ಸಾಧ್ಯ. ಪರಸ್ಪರರಲ್ಲಿ ಅನಾದರ, ತಿರಸ್ಕಾರ ಇದ್ದರೆ ಇದೂ ಸಾಧ್ಯವಿಲ್ಲ.

-ವಚನ ಶ್ರೀ ಗೋರಖನಾಥ, ಚಾಂಗಲೇರಾ, ರಾ.ಬ.ದಳ, ಸಿರ್ಸಿ

? ಮದುವೆಯಲ್ಲಿ ಗಂಡಿನ ಕಡೆಯದೊಂದು ತಾಯಿಯ ಮನೆಯದು ಎಂದು ಒಂದು ತಾಳಿ-ಹೀಗೆ 2 ಕಟ್ಟುವರಲ್ಲ. ಇದು ಸರಿಯೆ?

★ ಉತ್ತರ ಕರ್ನಾಟಕದಲ್ಲಿ 2 ತಾಳಿ ಹಾಕುವ ರೂಢಿ ಇದೆ. ಚಿತ್ರದುರ್ಗ ಮುಂತಾದ ಕಡೆ ಒಂದೇ ತಾಳಿ ಇರುತ್ತದೆ. ತಾಳಿ ಗಂಡನ ಕುರುಹು; ಗಂಡನೊಬ್ಬ; ಆದ್ದರಿಂದ ಒಂದೇ ತಾಳಿ ಇರಬೇಕು. ತೌರು ಮನೆಯ ಪರವಾಗಿ ತಾಳಿ ಹಾಕುವ ಅಗತ್ಯವಿಲ್ಲ; ತೌರಿನ ಸಂಬಂಧ ಹರಿದು ಕೊಳ್ಳುವುದೇ ತಾಳಿ ಧಾರಣೆಯ ಉದ್ದೇಶ.

? ಕರಿಮಣಿಗಳನ್ನು ತಾಳಿಯ ಜೊತೆ ಹಾಕುವ ಹಿನ್ನೆಲೆ ಏನು?

★ ವಿವಾಹಿತರ ಕುರುಹುಗಳು ಒಂದೊಂದು ಧರ್ಮ, ಒಂದೊಂದು ಜನಾಂಗಗಳಲ್ಲಿ ಒಂದೊಂದು ಬಗೆಯಾಗಿವೆ. ದಕ್ಷಿಣ ಭಾರತದಲ್ಲಿ ಮಾಂಗಲ್ಯ-ಕರಿ ಮಣಿ-ಕಾಲುಂಗರ ಮಹಿಳೆಯರಿಗೆ ಇವೆ. ಕ್ರೈಸ್ತರಲ್ಲಿ ಮದುವೆ ಉಂಗುರಗಳನ್ನು ಬದಲಾಯಿಸಲಾಗುತ್ತದೆ. ಭಾರತೀಯ ಸಂಸ್ಕೃತಿಗೆ ಒಗ್ಗಿಕೊಂಡ ಕೆಲವು ಮುಸಲೀಮರು, ಕ್ರೈಸ್ತರು ಸಹ ಕರಿಮಣಿ-ಮಾಂಗಲ್ಯ ಧರಿಸಿ, ಕುಂಕುಮ ಇಡುವುದನ್ನು ನೋಡುತ್ತೇವೆ. ಮಹಿಳೆಯು ಶಾರೀರಿಕವಾಗಿ ಅಬಲೆಯಾದ್ದರಿಂದ ಕಾಲುಂಗುರ, ಮಾಂಗಲ್ಯ (ಕರಿಮಣಿ ಸಹಿತ) ಗಂಡನ್ನುಳ್ಳವಳು ಎಂದು ಒಂದು ಬಗೆಯ ಎಚ್ಚರಿಕೆಯನ್ನು ಪರಪುರುಷರಿಗೆ ನೀಡುತ್ತವೆಂಬ ನಂಬಿಕೆ ಇತ್ತು. ನೈತಿಕ-ಧಾರ್ಮಿಕ ಮೌಲ್ಯಗಳಲ್ಲಿ ವಿಶ್ವಾಸ ಶಿಥಿಲವಾಗುತ್ತಿರುವ ಇಂದಿನ ದಿನಗಳಲ್ಲಿ ಈ ನಂಬಿಗೆಗಳು ಅರ್ಥ ಕಳೆದುಕೊಂಡಿವೆ. ಮೊದಲಿನ ಕಾಲದಲ್ಲಿ, ನಾವು ಸಣ್ಣವರಿದ್ದಾಗ. ಹೇಗೆ ಲಿಂಗಾಯತರು ಇಷ್ಟ ಲಿಂಗವನ್ನು ಅಗಲಿಸುತ್ತಿರಲಿಲ್ಲವೋ ಹಾಗೆ ಮಹಿಳೆಯರು ತಾಳಿ ಇಲ್ಲದೆ ಇರುತ್ತಿರಲಿಲ್ಲ. ದಾರ ಕಿತ್ತರೆ ಊಟ ಸಹ ಮಾಡದೆ ಪೋಣಿಸಿ ಧರಿಸಿಕೊಳ್ಳುತ್ತಿದ್ದರು. ಇಂದು 3-4 ಫ್ಯಾಶನ್ ತಾಳಿ ಮಾಡಿಕೊಂಡು ಧರಿಸುತ್ತಲಿದ್ದಾರೆ. ಹೀಗೆ ಧಾರ್ಮಿಕ ನಂಬಿಕೆ, ನೈತಿಕ ಮೌಲ್ಯ ಎರಡೂ ಕುಸಿಯುತ್ತಿವೆ.

-ರಾಜೇಶ್ವರಿ ಕೊಪ್ಪಳ, ಬೆಂಗಳೂರು

?. ನಮ್ಮ ಪರಿಚಿತರೊಬ್ಬರ ಮನೆಯಲ್ಲಿ ಶ್ರಾವಣದ ಪೂಜೆ ಇಟ್ಟಿದ್ದರು. ನಮಗೂ ಆಹ್ವಾನವಿತ್ತು, ಹೋಗಿದ್ದೆವು. ಲಿಂಗಾಯತ ಸಮಾಜದ ಗಣ್ಯರೊಬ್ಬರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅವರ ಅಸಂಬದ್ಧ ಭಾಷಣ ಕೇಳಿ ಕಸಿವಿಸಿಯಾದ ನಾನು ನಂತರ, "ಲಿಂಗಾಯತವು ಒಂದು ಜಾತಿಯೋ ಧರ್ಮವೋ ಎಂದೆ, ಅವರು ಅದೂ ಅಲ್ಲ, ಇದೂ ಅಲ್ಲ; ಅದು ಜೀವನ ಮಾರ್ಗ ಎಂದರು. ಹಾಗೆಂದರೇನು ?"

★ ಏನು ಮಾಡುವುದು! ಕೆಲವರು ಗಣ್ಯರು ಎನಿಸಿಕೊಂಡವರಿಗೆ ಕ್ರಮಬದ್ಧವಾದ ಅಧ್ಯಯನ ಇರುವುದಿಲ್ಲ. ಜಾತಿ-ಮತ-ಪಂಥ ಎಲ್ಲವೂ ಜೀವನ ಮಾರ್ಗಗಳೆ! ಆದರೆ ಅವುಗಳ ವ್ಯಾಪ್ತಿ ಬೇರೆ ಬೇರೆ. ಹಿಂದೂ ಧರ್ಮಕ್ಕೆ ವಿಶಿಷ್ಟ ಸಂಹಿತೆ, ಏಕರೂಪದ ಧಾರ್ಮಿಕ ಸಾಹಿತ್ಯ ಮುಂತಾಗಿ ಇಲ್ಲದ್ದರಿಂದ ಅದು ಒಂದು ವಿಶಿಷ್ಟ ಧರ್ಮವಲ್ಲ, ಜೀವನದ ಮಾರ್ಗ (a way of life) ಎಂದು ಅಸ್ಪಷ್ಟವಾಗಿ ಹೇಳಲಾಗುತ್ತದೆ. ಲಿಂಗಾಯತವು ಹಾಗಲ್ಲ. ಅದು ಒಂದು ಧರ್ಮ, ಪರಿಪೂರ್ಣ ಧರ್ಮ, ಜಾತಿಯಂತೂ ಅಲ್ಲವೇ ಅಲ್ಲ.

ಕಲ್ಯಾಣ ಕಿರಣದ ಓದುಗರಿಗೆ ಸೂಚನೆ :

ಕಾರಣಾಂತರದಿಂದ ಕಲ್ಯಾಣ ಕಿರಣದ ಕೆಲವು ವಿಳಾಸದಾರರಿಗೆ ಪತ್ರಿಕೆ ಸರಿಯಾಗಿ ತಲುಪುತ್ತಲಿಲ್ಲ. ಅಂಥವರು 50 ಪೈಸೆಯ ಒಂದು ಕಾರ್ಡ್ ಬರೆದು ಹಾಕಿರಿ. ಹಾಗೆ ಬರೆಯುವಾಗ ಪೂರ್ಣವಾಗಿ ವಿಳಾಸ ಬರೆಯಿರಿ. ಒಬ್ಬರು 4-5 ಪತ್ರ ಬರೆದರೂ ವಿಳಾಸವನ್ನೇ ಕೊಡುತ್ತಿರಲಿಲ್ಲ. ವಿಳಾಸ ಬದಲಾವಣೆಯಾದಲ್ಲಿ ಹಳೆಯ ಮತ್ತು ಹೊಸ ವಿಳಾಸಗಳೆರಡನ್ನೂ ಬರೆದು ಕಳಿಸಿರಿ. ಹಾಗೂ ಪತ್ರಿಕೆ ಬಂದಾಗ ಕವರ್ ಮೇಲೆ ಇರುವ ಕ್ರಮಸಂಖ್ಯೆಯನ್ನು ಬರೆದು ಇಟ್ಟುಕೊಂಡು ಅಗತ್ಯ ಬಿದ್ದಾಗ ಉಲ್ಲೇಖಿಸಿ ಪತ್ರ ಬರೆಯಿರಿ. ದಾನಿಗಳಿಗೆ ಉಚಿತವಾಗಿ ಪತ್ರಿಕೆ ಕಳಿಸುವ ಪರಿಪಾಠ ಇರುವುದರಿಂದ ಪುನಃ ಪುನಃ ಕಾಣಿಕೆ ಕೊಡುವವರ ಹೆಸರು ಸೇರ್ಪಡೆಯಾಗಿ ಕೆಲವರಿಗೆ 3-4 ಪ್ರತಿಗಳು ಹೋಗುತ್ತಿವೆ. ಅಂಥವರು 1 ಪ್ರತಿ ಮಾತ್ರ ಬರುವಂತೆ ಮಾಡಿ, ಉಳಿದವನ್ನು ಕಳಿಸದೆ ಇರಲು ದಯವಿಟ್ಟು ಪತ್ರ ಬರೆದು ಅನವಶ್ಯಕ ನಷ್ಟವನ್ನು ತಪ್ಪಿಸಿರಿ.

ಸನ್ಮಾನ್ಯ ಸಂಪಾದಕರು - ವಾಚಕರ ವಿಜಯ, ವಿಜಯ ಕರ್ನಾಟಕ ದಿನಪತ್ರಿಕೆ, ಬೆಂಗಳೂರು-ಹುಬ್ಬಳ್ಳಿ-ಧಾರವಾಡ

ದಿನಾಂಕ 27-4-2005 ರಂದು ಗದುಗಿನ ಶ್ರೀಗಳ ಹೇಳಿಕೆ "ಸಿದ್ಧಾಂತ-ಶಿಖಾಮಣಿ ಗ್ರಂಥ ಸುಳ್ಳಿನ ಸರಮಾಲೆ" ಎನ್ನುವ ಹೇಳಿಕೆ, ದಿನಾಂಕ 28-4-2005ರಂದು ಬಾಳೆ ಹೊನ್ನೂರಿನ ಶ್ರೀಗಳ ಹೇಳಿಕೆ "ಸಿದ್ಧಾಂತ ಶಿಖಾಮಣಿ ಅಪೂರ್ವ ಗ್ರಂಥ "ಎನ್ನುವ ಹೇಳಿಕೆ ಹಾಗೂ ವಾಚಕರ ವಿಜಯದಲ್ಲಿ ದಿ.3-5-2005ರಂದು ಶರಣಪ್ಪ ಹೊಸಮನಿ ಎನ್ನುವರ ಪತ್ರಕ್ಕೆ ಮುಂದುವರೆದ ನನ್ನ ಸ್ಪಷ್ಟೀಕರಣ.

1.ವೀರಶೈವ ಹಾಗೂ ಲಿಂಗಾಯತ ಎರಡೂ ಬೇರೆ ಬೇರೆ. ಸ್ವತಃ ವಿಶ್ವಗುರು ಬಸವಣ್ಣನವರೇ ಒಮ್ಮೆ "ವೀರಶೈವ"ವನ್ನು "ಲಿಂಗಾಯತನ" ಒಂದು ಹಂತವೆಂದು ಹೇಳಿದ್ದಾರೆ.(ಬಸವ ವಚನ ದೀಪಿ-ವ.ಸಂ-1159)

2.ವೀರಶೈವ ಶೈವದ ಒಂದು ಭಾಗ. ಶಿವನು ಭೂಮಿಯ ಮೇಲೆ ಆಗಿ ಹೋದ ಎಲ್ಲಾ ಮಾನವ ಜನಾಂಗಗಳಿಗೆ ಮೊದಲ ಗುರು; ಸಿಂಧೂತೀರದ ನಾಗರೀಕತೆಗೆ ಮೂಲಿಗ. ರಾಮ, ಕೃಷ್ಣ ಇವರೆಲ್ಲಾ ಅವನ ವಂಶದಲ್ಲಿಯೇ ಜನಿಸಿದ ಯೋಗಿಗಳು; ಚಾರಿತ್ರಿಕ ಹಾಗೂ ಪೌರಾಣಿಕ ಪುರುಷರು.(ಟೈಂಸ್ ಆಫ್ ಇಂಡಿಯಾ ದಿನಾಂಕ 9-3-2005 ಪುಟಸಂಖ್ಯೆ 01)ಮಾಂಸಾಹಾರಿ ವೀರಶೈವರು ಇಷ್ಟಲಿಂಗ ಇಲ್ಲದವರು "ವೀರಶೈವರೆಂದು" ಕರೆದು ಕೊಳ್ಳುವ ಜಾತಿಗಳ ದಾಖಲೆ ನಮ್ಮಲ್ಲಿ ಇದೆ. (ಕಲ್ಯಾಣ ಕಿರಣ ಪುಟ 42-44 ಸೆಪ್ಟಂಬರ್ 2002).

3.ಯೋಗಿರಾಜ ಶಿವನನ್ನು ಬಸವಣ್ಣನವರು ತಮ್ಮ ವಚನಗಳಲ್ಲಿ ತಮ್ಮ 'ಮೂಲಿಗ'ನೆಂದೂ, ತಾವುಗಳು ಸಹಿತ ಅವನ ವಂಶ-ಪರಂಪರೆ ಇವುಗಳಲ್ಲಿಯೇ ಜನಿಸಿದವನು ಎಂದಿದ್ದಾರೆ.

4.ಶೈವ ಧರ್ಮವು ಜಗತ್ತಿನ ಪ್ರಾಚೀನ ಧರ್ಮ; ತದ ನಂತರ ವೈದಿಕ, ಜೈನ, ಬೌದ್ಧ ಧರ್ಮ ಬಂದಿವೆ. ಬಹು ಚರ್ಚಿತ "ರಾಮಜನ್ಮ ಭೂಮಿ"ಯ ಕೆಳಗಿನ ಭಾಗದಲ್ಲಿ ಕಳಚೂರಿ ಶೈಲಿಯ 11-12ನೇ ಶತಮಾನದ ಶೈವ ದೇವಾಲಯದ ಅವಶೇಷಗಳಿರುವುದನ್ನು ಯೂರೋಪಿಯನ್ ಆರ್ಕಿಯಾಲಜಿಸ್ಟ್ ವರದಿ ಉಲ್ಲೇಖಿಸಿ ಆಂಗ್ಲ ವಾರಪತ್ರಿಕೆಯಲ್ಲಿ ಸುಮಾರು 2 ವರ್ಷಗಳ ಹಿಂದೆ ಲೇಖನ ಪ್ರಕಟವಾಗಿತ್ತು. ಇದು ಟೈಂಸ್ ಆಫ್ ಇಂಡಿಯಾ ದಿನಾಂಕ 9-3-2005 ರ ವರದಿಗೆ ಪೂರಕವಾಗಿದೆ. ಹರಿಶ್ಚಂದ್ರ ಮಹಾರಾಜ ಮತ್ತಿತರರು ತಮ್ಮ ಪೂರ್ವಜನಾದ "ಶಿವನ" ಸ್ಮಾರಕವನ್ನು ಅಯೋಧ್ಯೆಯಲ್ಲಿ ಸ್ಥಾಪಿಸಿರಬಹುದು. ಕಾಲಕ್ರಮೇಣ ಎಲ್ಲಾ ಧರ್ಮಗಳು ಪರಸ್ಪರ ಕೊಡು-ಕೊಳ್ಳುವ ಕೆಲಸ ಮಾಡಿವೆ.

5.ಬಸವಣ್ಣನವರೇ ಲಿಂಗಾಯತ ಧರ್ಮದ ಸ್ಥಾಪಕರೆಂಬುದನ್ನು ಶಿವಯೋಗಿ ಸಿದ್ಧರಾಮರು,. ನೂರಾರು ಸಮಕಾಲೀನ ವಚನಕಾರರು ಹಾಗೂ ಜಾನಪದರು ಸ್ಪಷ್ಟವಾಗಿ ಹೇಳಿದ್ದಾರೆ. ಮೋಳಿಗೆಯ ಮಾರಯ್ಯನವರು ಸಂಕೀರ್ಣ ವಚನ ಸಂಪುಟ-3 ವ.ಸಂ.-2092ರಲ್ಲಿ(ಪುಟ-700) "ನೀನು ವೀರಶೈವವುನಾರಾಧಿಸದೇ, ಹೊಸ ಧರ್ಮವನ್ನು ನಮಗೆ ಕೊಟ್ಟೆ" ಎಂದಿದ್ದಾರೆ. (ಕರ್ನಾಟಕ ಸರ್ಕಾರದ ಪ್ರಕಟಣೆ).

6.ವೀರಶೈವವು "ಲಿಂಗಾಯತ"ರ ಒಂದು ಉಪಜಾತಿ ಮಾತ್ರ ಎಂಬುದು ಬ್ರಿಟಿಷ್ ಸೆನ್ಸಸ್ ದಾಖಲೆಗಳಲ್ಲಿ ಸ್ಪಷ್ಟವಾಗಿದೆ. ನೋಡಿ-ಮಿಥಿಕ್ ಸೊಸೈಟಿ ಪುಸ್ತಕ ಸಂಖ್ಯೆ 315-487-IND 1891V_2 ಹಾಗೂ P-309, 315, 487 IND - 190/ V2-PEA ಹಾಗೂ P-315-482-IND-1881-V_4 ಅದರಲ್ಲಿರುವ 34 ಲಿಂಗಾಯತ ಉಪಜಾತಿಗಳ ಪಟ್ಟಿಯಲ್ಲಿ ವೀರಶೈವ, ಜಂಗಮ ಒಂದು ಉಪಜಾತಿ ಮಾತ್ರ. ಈ ವಿಷಯವನ್ನು "ವೀರಶೈವ" ಮಹಾಸಭೆಯವರು ಗಮನಿಸಿ, ತಮ್ಮ ಮಹಾಸಭೆಯ ಹೆಸರನ್ನು ಬದಲಾಯಿಸಿಕೊಳ್ಳುವುದು ಅತ್ಯಂತ ಸೂಕ್ತ. ಗದುಗಿನ ತೋಂಟದಾರ್ಯ ಶ್ರೀಗಳು 'ವೀರಶೈವ' ಅಧ್ಯಯನ ಸಂಸ್ಥೆಯ ಹೆಸರನ್ನು 'ಲಿಂಗಾಯತ' ಅಧ್ಯಯನ ಸಂಸ್ಥೆಯೆಂದು ಬದಲಿಸಿರುವುದು ಸ್ತುತ್ಯ. ಪ್ರಾಮಾಣಿಕ ಮನಸ್ಸಿನ ನಿದರ್ಶನ. ಅದೇ ರೀತಿ ಎಲ್ಲಾ ಲಿಂಗಾಯತರ ವಿದ್ಯಾಸಂಸ್ಥೆಗಳು ತಮ್ಮ ಹೆಸರನ್ನು ಮಾರ್ಪಡಿಸಿಕೊಳ್ಳುವುದು ಸೂಕ್ತ.

7.ಸಿದ್ಧಾಂತ ಶಿಖಾಮಣಿಯ ರಚನೆ ಕೇವಲ 500 ವರ್ಷಗಳ ಹಿಂದಿನದು ಎಂದು "The Tribes and Castes of Southern India-Vol IV(K-M Series) P-260 Editor - Edgar Thurston & Rangachari ಯವರು ಉಲ್ಲೇಖಿಸಿದಾರೆ. ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರ ಭಾಷ್ಯ-ನಿಜದ ನಿಲುವು-ಡಾ॥ ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು -2003 - ಆವೃತಿ, -ಪುಟ- 52- 54ರಲ್ಲಿ ಈ ಗ್ರಂಥವು ಅನೇಕ ಗ್ರಂಥಗಳ ಸಂಕಲನ ಗ್ರಂಥ ಹಾಗೂ ಇದರ ರಚನೆ "ಬಸವ 'ನಂತರದ್ದು ಎಂದು ವಿಷದೀಕರಿಸಿದ್ದಾರೆ.

ಇಷ್ಟೆಲ್ಲಾ ದಾಖಲೆಗಳ ಸತ್ಯ ನಮ್ಮೆದುರಿಗೆ ಇರುವಾಗ "ಸಿದ್ಧಾಂತ ಶಿಖಾಮಣಿ " ಯಿಂದ ವಿಶ್ವಗುರು ಬಸವಣ್ಣನವರು ಪ್ರೇರಣೆ ಪಡೆದರು, ಎಂದು ಹೇಳುವುದು. ಸಾಧಿಸ ಹೊರಟಿರುವುದು ಅಸಂಬದ್ಧ, ಅಪ್ರಾಮಾಣಿಕತನದ ಪರಮಾವಧಿ, ಲಿಂಗಾಯತರನ್ನು ಬಸವ ಭಕ್ತರನ್ನು ದಾರಿ ತಪ್ಪಿಸಲು ಕೆಲವು ಬ್ರಾಹ್ಮಣ ದ್ವೇಷಿಗಳು, ಪುರೋಗಾಮಿ ಹಿಂದುಗಳು, ಜಾತಿವಾದಿಗಳು, ಬಹುದೇವತೋಪಾಸಕರು ಲಿಂಗಾಯತರಲ್ಲಿಯೇ ಕಲಹ ಸೃಷ್ಟಿಸಲು ಹೊಂಚು ಹಾಕಿರುವ ಆಷಾಡ ಭೂತಿಗಳ ಒಂದು ಕುಟಿಲ ತಂತ್ರ ಮಾತ್ರ,

ವಿಶ್ವಗುರು ಬಸವಣ್ಣನವರು ತಮ್ಮ ಪೂರ್ವಜರಾದ, ಶಿವ, ರಾವಣ, ರಾಮ, ಕೃಷ್ಣ ಹನುಮಂತ.........ಇತ್ಯಾದಿಯವರನ್ನು ಸ್ಮರಿಸುತ್ತಾ ತಮಗೆ ಸರಿ ಎನಿಸದ ವಿಷಯಗಳಲ್ಲಿ ಎಲ್ಲರನ್ನೂ ವಿಮರ್ಶಿಸಿದ್ದಾರೆ. ವಿಶ್ವಗುರು ಬಸವಣ್ಣನವರು ಜಗತ್ತಿನ ಎಲ್ಲಾ ಧರ್ಮಗಳ "ಪ್ರಾಟೆಸ್ಟಂಟ್". ಆತನೊಬ್ಬನೇ ಜಗತ್ತಿಗೆ ಗುರುವಾಗಲರ್ಹನು. ಏಕೆಂದರೆ ಇಷ್ಟಲಿಂಗವು ಸಾಕಾರವೂ ಅಹುದು, ನಿರಾಕಾರವೂ ಅಹುದು. ಭಗವಂತನ ನಿರಾಕಾರ ತತ್ವ ಪ್ರತಿಪಾದಿಸುವ ವೈದಿಕ, ಇಸ್ಲಾಂ, ಕ್ರಿಶ್ಚಿಯನ್ ಮತಸ್ಥರಿಗೆ, ಧರ್ಮೀಯರಿಗೆ ಅದು ನಿರಾಕಾರವಾಗಿ, ಸಾಕಾರ ಅರ್ಚನೆ ಮಾಡುವವರಿಗೆ ಅದು ಸಾಕಾರವಾಗಿರುವುದರಿಂದ ಎಲ್ಲ ಜಾತಿ, ವರ್ಗ, ವರ್ಣದವರು ಅರಿತು ಆಚರಣೆ ಮಾಡಬಹುದಾದ ಏಕೈಕ ಮಾರ್ಗ "ಬಸವ"ಮಾರ್ಗವಾಗಿದೆ. ಆದ್ದರಿಂದಲೇ 12ನೇ ಶತಮಾನದ ಅನೇಕ ಶರಣರು ಈ ಪಥವು "ನೀ ತೋರಿದ ಪಥವಯ್ಯ"ಎಂದಿದ್ದಾರೆ. ಎಲ್ಲಿಯವರೆಗೆ ವೈದಿಕರು ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ವಿಚಾರಧಾರೆ ಒಪ್ಪುವುದಿಲ್ಲವೋ, ಇತರರು "ಬಸವಣ್ಣನವರ"ಅರ್ಥಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ನಾವು ಹಿಂದೂ ಧರ್ಮವನ್ನು ಉದ್ಧಾರ ಮಾಡುತ್ತೇವೆಂಬ ಮಾತು ಬಾಲಿಶ.

8.ಲಿಂಗಾಯತರ ಅನೇಕ ಮಠಾಧಿಪತಿಗಳು ಬಾಹ್ಯದಲ್ಲಿ "ಬಸವ "ಣ್ಣನವರನ್ನು ಒಪ್ಪಿದರೂ ಪರಂಪರೆಯ ಹೆಸರಿನಲ್ಲಿ ಕೆಲವು ಹಳೆಯ ಆಚರಣೆಗಳನ್ನು ಮುಂದುವರಿಸಿಕೊಂಡು ಬಂದು ತಾವು ದಾರಿತಪ್ಪಿದ್ದಲ್ಲದೆ, ಭಕ್ತರನ್ನೂ ದಾರಿತಪ್ಪಿಸಿ ದಿಶಾಹೀನರನ್ನಾಗಿಸಿದ್ದಾರೆ. ಈ ವಿಷಯದಲ್ಲಿ ಯಾವುದಾದರೂ ಚರ್ಚೆಗೆ ಈ ಮೂಲಕ ನಾನು ಸಿದ್ಧ. -ಎಂ.ಆರ್.ಪಂಪನಗೌಡ, ಬಳ್ಳಾರಿ.

ಹೈದರಾಬಾದ್ ನಗರದಲ್ಲಿ ಬಸವ ಮೂರ್ತಿಯ ಪ್ರತಿಷ್ಠಾಪನೆ

ಬಸವ ಧರ್ಮಪೀಠದ ಅಂಗ ಸಂಸ್ಥೆಯಾದ ರಾಷ್ಟ್ರೀಯ ಬಸವ ದಳ, ಹೈದರಾಬಾದ್‌ದಲ್ಲಿ ನೂತನವಾದ ಬಸವ ಮಂಟಪವನ್ನು ಕಟ್ಟಿದ್ದು ದಿ.16-10-2005ರಂದು ಅದರ ಉದ್ಘಾಟನೆ, ಮತ್ತು ವಿಶ್ವಗುರು ಬಸವಣ್ಣನವರ ಅಭಯ ಹಸ್ತದ ಅಮೃತ ಶಿಲಾ ಪುತ್ಥಳಿಯ ಪ್ರತಿಷ್ಠಾಪನೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ನಡೆಯಲಿದೆ.

ದಿ.16ರಂದು ಬೆಳಿಗ್ಗೆ 10ರಿಂದ ವಿಶೇಷ ಪೂಜಾ ವಿಧಿಗಳು ನಡೆಯಲಿದ್ದು 11 ಗಂಟೆಗೆ ಲಿಂಗಾಯತ ಧರ್ಮ ಸಮಾವೇಶ ಜರುಗಲಿದೆ.

ದಿ.15ರಂದು ದೆಹಲಿಯಿಂದ ಆಗಮಿಸುವ ಪೂಜ್ಯ ಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿಯವರು ಸಂಜೆ 4 ಗಂಟೆಗೆ ನಯಾ ಬಸ್ತಿಯ ಬಸವ ಪ್ರಾರ್ಥನಾ ಮಂದಿರದ ಬಳಿ ಬಸವ ಮೂರ್ತಿಯನ್ನು ಸ್ವಾಗತಿಸಿದ ನಂತರ ಅದನ್ನು ಮೆರವಣಿಗೆ-ಉತ್ಸವದ ಮೂಲಕ ಜಿಯಾಗುಡಾಕ್ಕೆ ತರಲಾಗುವುದು. ದಿ 15ರಂದು ಸಂಜೆ 6ರಿಂದ ಕಾರ್ಯಕ್ರಮ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ದಿ.21-8-2005 ರಿಂದಲೂ ಹಿಂದಿಯಲ್ಲಿ ವಿಶ್ವಧರ್ಮ ಪ್ರವಚನವನ್ನು ಮಾಡುತ್ತಿದ್ದು, ಅದರ ಸಮಾರೋಪ ಮತ್ತು ರಾಷ್ಟ್ರೀಯ ಬಸವ ದಳಗಳ ಸಮಾವೇಶ ಜರುಗಲಿದೆ. ಹೈದರಾಬಾದ್ ರಾಷ್ಟ್ರೀಯ ಬಸವ ದಳದವರು ಎಲ್ಲರಿಗೂ ಭಾಗವಹಿಸಲು ಹೃತ್ಪೂರ್ವಕ ಆಹ್ವಾನ ನೀಡಿರುತಾರೆ.

ಬಸವ ಮಂಟಪ, 2 J ಬಸ್ ಸ್ಟಾಪ್ ಬಳಿ, ಕೇಶವ ಸ್ವಾಮಿ ನಗರ ಜಿಯಾಗುಡ, ಹೈದರಾಬಾದ್-500006, ದೂರವಾಣಿ : 040-24823804 , (0)9448113920

“ಬಸವನೊಬ್ಬನೇ ಗುರು ಯುಗ-ಜುಗ-ಭುವಿ-ಬ್ರಹ್ಮಾಂಡಕ್ಕೆಲ್ಲ”

-ಎಂ.ಆರ್.ಪಂಪನಗೌಡ

ಪೂಜ್ಯ ಸಂಪಾದಕರು, ಕಲ್ಯಾಣ ಕಿರಣ-ಬೆಂಗಳೂರು-ಇವರ ಸನ್ನಿಧಿಗೆ,

‘ನಿಮ್ಮ ಆಗಸ್ಟ್ ಸಂಚಿಕೆ’ ಓದಿ ಪರಮಾನಂದವಾಯಿತು. ಅಂದು ನಿಮಗೆ ಬಳ್ಳಾರಿಗೆ ಬಂದಾಗ ನಾನು ನಿಮ್ಮ ಚರಣಕ್ಕೆ ಸಲ್ಲಿಸಿದ ಪತ್ರಿಕಾ ವರದಿಯ ಕನ್ನಡ ಅನುವಾದ ನೋಡಿ ಸಂತೋಷವಾಯಿತು. ಪ್ರಸ್ತುತ ನಾನು, ನೀವು ಲೇಖನದಲ್ಲಿ(ಪುಟ-32ರಲ್ಲಿ) ಹೇಳಿರುವಂತೆ-ಶಿವನು ಯಾವ ಭಾಷೆಯಲ್ಲಿ ಭೋಧಿಸಿದ ? ಹಾಗೂ ಪುಟ 29ರಲ್ಲಿ ಲಂಕಾ ಚಕ್ರೇಶ್ವರನಾದ ದ್ರಾವಿಡ ರಾಜ ರಾವಣನ ತಾಯಿಯ ಅಪೇಕ್ಷೆ ಮೇರೆಗೆ ಶೂದ್ರರಾಜನು ಒಯ್ದ ಲಿಂಗವು ಭುವಿಯಲ್ಲಿ ಇಳಿದು ಹೋಗುವಂತೆ ಮಾಡಿದ ಎಂದಿದ್ದೀರಿ. ಅದನ್ನಷ್ಟೇ ನನ್ನ ಈ ಲೇಖನದಲ್ಲಿ ಚರ್ಚಿಸಲು ಬಯಸುವೆ. ಶಿವನು ಮೊಹಂಜದಾರೋ ಹಾಗೂ ಹರಪ್ಪ ಸಂಸ್ಕೃತಿಯ ಮೂಲಿಗ ಎಂಬುದರಲ್ಲಿ ಬಹುತೇಕ ಪಾಶ್ಚಾತ್ಯ, ಆರ್ಯ, ದ್ರಾವಿಡ ವಿದ್ವಾಂಸರು ಹಾಗೂ ಸಮಾಜ ಶಾಸ್ತ್ರಜ್ಞರು ಒಪ್ಪಿದ ವಿಷಯವೇ ! ಆದರೆ ಆತನು ಎಲ್ಲಾ ಜನಂಗದವರಿಗೂ, ಅದರಲ್ಲೂ ದ್ರಾವಿಡರಿಗೆ ಪರಮಾರಾಧ್ಯನು. ಆತನು ಯಾವ ಜನಾಂಗಗಳಿಗೆ, ಯಾವ ಭಾಷೆಯಲ್ಲಿ ಬೋಧಿಸುತ್ತಿದ್ದನೆಂದು ಕಂಡುಕೊಳ್ಳಲು ನಾವು ಅನೇಕ ವಿದ್ವಾಂಸರ ಅದರಲ್ಲೂ ಬುಡಕಟ್ಟು ಜಾನಪದ ಸಂಸ್ಕೃತಿಯನ್ನು ಅಭ್ಯಾಸ ಮಾಡಬೇಕಾಗುತ್ತದೆ. ಬಸವ ವಚನ ದೀಪ್ತಿಯ ವಚನ ಸಂಖ್ಯೆ 395ನ್ನು ನೋಡಿ, ಕೃತಯುಗದಲ್ಲಿ ಕೇತಾರವೆಂಬ ಮೂಲಸ್ಥಾನ ಎನ್ನುವ ಶಬ್ದ ಬರುತ್ತದೆ. ಇದು ಸಿಂಧೂ ನದೀ ತೀರದ ನಾಗರೀಕತೆಗೆ ಅಂಟಿಕೊಂಡಿರುವ ಮಧ್ಯಪ್ರದೇಶ/ಛತ್ತೀಸ್‌ಗಢ್ ರಾಜ್ಯದಲ್ಲಿದೆ. ಅಲ್ಲಿ ಶೇಕಡಾ 40-50ರಷ್ಟು ಜನರು ಗೊಂಡರು. ಈ “ಗೊಂಡ” ರ ಆರಾಧ್ಯದೈವ ಮಹಾದೇವ, ಪಾರ್ವತಿ. ಇವರ ಭಾಷೆಯು ಚಿತ್ರಲಿಪಿ ಹಾಗೂ ಇದು ಕನ್ನಡ, ತೆಲುಗು, ತಮಿಳು, ಕೊಡವ, ಮಲೆಯಾಳಿ ಇತರ ದ್ರಾವಿಡ ಭಾಷೆಗಳಿಗೆ ಜನನಿಯೆಂದು ಬಹುತೇಕ ವಿದ್ವಾಂಸರು ಒಪ್ಪಿದ್ದಾರೆ. ಡಾ||ಮೋತಿ-ರಾವಣ(ರಾಮ ಅಲ್ಲ)ಕಂಗಾಲಿ ಎನ್ನುವ ಪ್ರೊಫೆಸರರು ಇಂದಿನವರೆಗೂ ಓದಲಾಗದ ಸಿಂಧೂ ತೀರದ ಎಲ್ಲಾ ಚಿತ್ರಲಿಪಿಗಳನ್ನು ಗೊಂಡಿ ಭಾಷೆಯ ಜ್ಞಾನದ ಮೂಲಕ ಅದರ ಲಿಪಿಯ ರಹಸ್ಯವನ್ನು ಜಗತ್ತಿಗೇ ಸಾರಿದ್ದಾರೆ. ಅವರ ಪ್ರಕಾರ ಸಿಂಧೂ ತೀರದ ಚಿತ್ರಲಿಪಿ ಆದಿ ದ್ರಾವಿಡ ಭಾಷೆ, ಅವುಗಳಲ್ಲಿಯ ಕೆಲವು ಶಬ್ದಗಳ ಅನುವಾದ ಕನ್ನಡ, ತೆಲುಗು ಭಾಷೆಗಳಲ್ಲಿ ಮುಂದೆ ಬರೆಯುವೆ. ಈ ‘ಗೊಂಡ.’ ಜನಾಂಗದಿಂದಲೇ ದ್ರಾವಿಡರ ಬಹುತೇಕ ಜಾತಿಗಳು, ಪಂಗಡಗಳು ಬೇರೆ-ಬೇರೆ ಹಂತಗಳಲ್ಲಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೇರೆಯಾದವೆಂದೂ ಸಮಾಜ ಶಾಸ್ತ್ರಜ್ಞರ ನಿಲುವು ‘ಗೊಂಡ’ಶಬ್ದ ಸುಧಾರಿತ ರೂಪ ‘ಗೌಡ.’ಗಾವುಂಡ, ಗೌಡ ಹಾಗೂ ಅದರ ಸಮಾನಾಂತರ ಜಾತಿಗಳು ಇಡೀ ದ್ರಾವಿಡ ದೇಶದ ಮೂಲಿಗರು. ಇದನ್ನು ಬುಡಕಟ್ಟು ಸಾಹಿತಿಗಳಾದ ಇ.ಥರ್ಸ್ಟನ್, ರಂಗಾಚಾರಿ, ಸರ್.ಸೈಯದ್ ಸಿರಾಜ್ ಉಲ್ ಹಸನ್, ಡಾ||ಕೆ.ಎಂ.ಮೈತ್ರಿ, ಶಂಬಾ ಜೋಷಿ, ಬ್ರಿಟೀಷ್ ಗೆಜೆಟಿಯರ್ ಹೀಗೆ ಅಸಂಖ್ಯಾತ ವಿದ್ವಾಂಸರು ಒಪ್ಪಿದ್ದಾರೆ. ಡಾ||ಕಿಟ್ಟೆಲ್ ಶಬ್ದಕೋಶದ ಪ್ರಕಾರ ‘ದ್ರಾವಿಡ’ಎಂದರೆ ‘ಶೈವ’ ಹಾಗೂ ‘ರಾಕ್ಷಸ’ಎಂಬ ಅರ್ಥವಿದೆ. ಮೊದ ಮೊದಲು ‘ಶಿವನ’ ಹಿಂದೆ ಇದ್ದ ಜನಾಂಗಗಳು ಯಜ್ಞ, ಯಾಗಗಳನ್ನು ಮಾಡುತ್ತಿಲ್ಲವಾದ್ದರಿಂದ ಅವರೆಲ್ಲರನ್ನು ‘ದ್ರಾವಿಡರು’ಎಂದು ಕರೆದಿದ್ದಾರೆ. ಬದುಕಿದ್ದಾಗ ಶಂಬಾ ಜೋಷಿಯವರನ್ನು ಹಾಗೂ ದಯಾನಂದ ಸರಸ್ವತಿಯವರನ್ನು ಅವಮಾನಿಸಿದ ವಿದ್ವಾಂಸರು ಈಗ ಶಂಬಾ ಜೋಷಿಯವರನ್ನು ಆಧುನಿಕ ಸಮಾಜ ಶಾಸ್ತ್ರಜ್ಞರ ಗುರುವೆಂದೂ, ದಯಾನಂದ ಸರಸ್ವತಿಯವರನ್ನು ವೇದಗಳಿಗೆ ನಿಜವಾದ ಭಾಷ್ಯಕಾರ ಎಂದು ಒಪ್ಪತೊಡಗಿದ್ದೂ ಒಂದು ವಿಪರ್ಯಾಸ. “ಶಿವ, ರಾಮ, ಕೃಷ್ಣ ಇವರೆಲ್ಲಾ ಯೋಗಿಗಳು. ನಮ್ಮ ಪೂರ್ವಜರು “ಜಾತಿಯಿಂದ ಶ್ರೇಷ್ಠತೆ ಬರುವುದಿಲ್ಲ” ಎಂದು ಹೇಳಿದ ಸ್ವಾಮಿ ದಯಾನಂದ ಸರಸ್ವತಿಯವರನ್ನು ವಿಷವಿಟ್ಟು ಕೊಂದವರೇ ಇಂದು ಗುಣಗಾನ ಮಾಡುತ್ತಿದ್ದಾರೆ. ಶಿವನನ್ನು ಹೀಗಳೆಯುವವರನ್ನು ಒಂದು ವಚನದಲ್ಲಿ ಬಸವಣ್ಣನವರು “ಅಂದು ವೀರಭದ್ರ ದಕ್ಷನ ಯಜ್ಞ ಕೆಡಿಸುವಲ್ಲಿ, ವಿಷವಟ್ಟಿ ಸುಡುವಲ್ಲಿ

ದೇವರೆಂಬವರೆತ್ತ ಹೋದರು” ಎಂದು ಯಜ್ಞ-ಯಾಗಗಳನ್ನು ನಂಬಿದವರಿಗೆ ಛೇಡಿಸಿದ್ದಾರೆ! 182 ತಲೆಮಾರುಗಳು ಶಿವನಿಂದ ಆಗಿಹೋಗಿವೆ ಎಂದು ‘ಕಭದ’ ರಾಜ ಹೇಳುವ ಮಾತು ಸತ್ಯವೆನಿಸುತ್ತದೆ. ಏಕೆಂದರೆ ರಾಮನು, ಕೃಷ್ಣನು ಶಿವನ ಸಂತತಿಯಲ್ಲಿ ಜನಿಸಿದವರೇ ! ಉದಾ : ‘ಕೃಷ್ಣ’ ‘ಎಂದರೆ ಕಪ್ಪು ಹಾಗೂ ಅವನಿದ್ದದ್ದೂ ಕಪ್ಪು, ರಾಮನನ್ನು ಚಿತ್ರಗಳಲ್ಲಿ ಗೌರವರ್ಣದವನಾಗಿ ತೋರಿಸುತ್ತಾರೆ. ಈ ಬಣ್ಣದ ವೈಪರೀತ್ಯ ಡಾರ್ವಿನ್ ಸಿದ್ಧಾಂತದ ಪ್ರಕಾರ ಸರಿ. ಏಕೆಂದರೆ ಮಗುವು ತಂದೆ-ತಾಯಿಯರನ್ನು ಹೋಲುತ್ತದೆ. ಹಾಗೂ ಭಿನ್ನವಾಗಿರುತ್ತದೆ. ಎಂದು. ಅದರಂತೆ ಕೃಷ್ಣನು ಶಿವನಂತೆ ಕಪ್ಪಗಿದ್ದಾನೆ. ಹಾಗೂ ರಾಮ ಮುತ್ತಜ್ಜಿಯಂತೆ (ಪಾರ್ವತಿಯಂತೆ) ಗೌರವರ್ಣದವನಾಗಿದ್ದಾನೆ. ಇದಕ್ಕೆ ಇನ್ನೊಂದು ಪ್ರಬಲ ಸಾಕ್ಷಿ ಎಂದರೆ ಬಹು ಚರ್ಚಿತ ರಾಮಜನ್ಮಭೂಮಿಯ ಕೆಳಗಡೆ ಏಕರ್ಸೇ ತೆಗೆದರೆ (ಪಾಶ್ಚಾತ್ಯರು) ಅಲ್ಲಿ 12ನೇ ಶತಮಾನದ ಕಳಚೂರಿ ಶೈಲಿಯ (ಬಿಜ್ಜಳನು ಕಳಚೂರಿ ವಂಶಸ್ಥನು) ಶೈವ ದೇವಾಲಯದ ಕುರುಹುಗಳಿರುವುದು ಕಂಡು ಬಂದಿದೆಯಂತೆ. ಕಾರಣವಿಷ್ಟೆ ರಾಮನ ಪೂರ್ವಜರು ಹರಿಶ್ಚಂದ್ರನ ವಂಶಸ್ಥರು. ಹರಿಶ್ಚಂದ್ರನಾದರೋ ಅಪ್ಪಟ ಶೈವ. ಬುಡಕಟ್ಟು ಜನರಿಗೆ ತಮ್ಮ ಪೂರ್ವಜರನ್ನು ದೇವರೆಂದು ಭಾವಿಸಿ, ಪೂಜಿಸುವ ಪರಿಪಾಠವಿತ್ತು. ಶಿವನ ನಂತರ ಹಿಂದಿನಿಂದ 52ನೇ ತಲೆಮಾರಿನಲ್ಲಿ ‘ಕೃಷ್ಣ’ ಜನಿಸಿದನೆಂಬುದು ನಿಜವೇ. ಏಕೆಂದರೆ ‘ಕಲಿಕಾಲ’ ಆರಂಭವಾಗಿ 5104 ವರ್ಷಗಳಾಗಿವೆ. ಸರಾಸರಿ 90-100 ವರ್ಷ ತಲೆಮಾರುಗಳೆಂದರೆ ತಾಳೆಯಾಗುತ್ತದೆ. ನಾಲ್ಕು ಯುಗಗಳು 18 ಸಲ ಈಗಾಗಲೇ ಪುನರಾವರ್ತನೆಯಾಗಿವೆ. ಅಂದರೆ ಬ್ರಹ್ಮಾಂಡ ಜನಿಸಿ ಸುಮಾರು 196 ಕೋಟಿ ವರ್ಷಗಳಾಗಿವೆಯೆಂಬ ವಿಜ್ಞಾನಿಗಳ ವಾದಕ್ಕೂ, ಪ್ರಾಚೀನ ಭಾರತೀಯರ ಕಾಲಗಣನೆಗೂ ಅದ್ಭುತವಾದ ಹೊಂದಾಣಿಕೆಯಾಗುತ್ತದೆ. ಆದರೆ ಭಾರತೀಯರು ಬಹುದೇವತಾ ಉಪಾಸನೆಯಲ್ಲಿ ತೊಡಗಿ ತಮ್ಮಿಂದಾದ ಎಲ್ಲವನ್ನೂ ಚಿಕಿತ್ಸಕ ಬುದ್ಧಿಯಿಂದ ನೋಡದೇ ಇದ್ದುದರ ಫಲವೇ ಇವಕ್ಕೆಲ್ಲಾ ಕಾರಣ.

ಇನ್ನು ರಾವಣನನ್ನು ‘ಶೂದ್ರರಾಜನೆಂದು’ ‘ಹೇಳಿದ್ದೀರಿ. ಇದು ಒಂದು ಕೋನದಿಂದ ಸರಿ. ಇನ್ನೊಂದು ಕೋನದಿಂದ ಸರಿ ಎನಿಸದು. ಆಗ ಶೈವರನ್ನೆಲ್ಲಾ ಶೂದ್ರರೆಂದು ದಸ್ಯು (ದ್ರಾವಿಡ) ಎಂದು ಕರೆಯಲಾಗುತ್ತಿತ್ತು. ಆದರೆ ರಾವಣನು “ಪೌಲಸ್ತ್ಯ ಬ್ರಹ್ಮನ” ಮಗನು. ಅಂದರೆ ಬ್ರಾಹ್ಮಣನು. ಆಗ ಕರ್ಮದ ಆಧಾರದಿಂದ ವರ್ಣ ನಿರ್ಧಾರವಾಗುತ್ತಿದ್ದವೇ ಹೊರತು ಜಾತಿಯಿಂದಲ್ಲ. ಇದಕ್ಕೆ ರಾವಣ, ವಿಭೀಷಣ ಇವರ ನೇರ ಸಂತತಿಯವರೆಂದು ಹೇಳಿಕೊಳ್ಳುವ’ ಅನೇಕ ಜಾತಿಗಳನ್ನು ಆಂಗ್ಲ ವಿದ್ವಾಂಸರು ಗುರುತಿಸಿದ್ದಾರೆ. ಇವೆಲ್ಲವೂ ‘ಗೊಂಡರ’ ಉಪಜಾತಿಗಳೇ. ಇದು 2600 ಉಪಜಾತಿಗಳನ್ನೊಳಗೊಂಡ ಒಂದು ಬೃಹತ್ ಸಂಕುಲ. ಬುಡಕಟ್ಟು ಜನರು ತಮಗೆ ಉಪಕಾರ ಮಾಡಿದ, ಅಪಕಾರ ಮಾಡಿದ, ಪ್ರಾಣಿ, ಪಶು, ಪಕ್ಷಿಗಳನ್ನು ವೃತ್ತಿಯಲ್ಲಿ ಬಳಸುವ ಉಪಯೋಗವಾಗುವ ಯಾವುದಾದರೂ ವಸ್ತುವನ್ನು ಲಾಂಛನವಾಗಿ ಬಳಸುತ್ತಿದ್ದರು. ಇಂದಿಗೂ ಅನೇಕ ಬುಡಕಟ್ಟುಗಳು ಆನೆ, ಎಮ್ಮೆ, ಹುಲಿ ಇತ್ಯಾದಿಗಳ ಕೊಂಬು, ಉಗುರು ಇತ್ಯಾದಿಗಳನು ಆಭರಣಗಳ ರೂಪದಲ್ಲಿ ಹೆಮ್ಮೆಯ ಸಂಕೇತವಾಗಿ ಬಳಸುತ್ತಾರೆ. ಈ ಪರೀಕ್ಷೆಯಲ್ಲಿಯೇ ‘ಶಿವನ’ ಮಗನಾದ ಗಣಪತಿಯು ಅಂದರೆ ಶಿವನ ಗಣಗಳಿಗೆಲ್ಲ ಅದರಲ್ಲೂ ಆನೆಯ ಸೈನ್ಯದ (ಗಜ)ಯಜಮಾನನಾಗಿರಲೂ ಸಾಕು. ಆದ್ದರಿಂದಲೇ ಆನೆಯ ರೂಪ ಆತನಿಗೆ ಕೊಟ್ಟರು. ಇಲ್ಲಿ ಕತೆಯಲ್ಲಿ ಬರುವಂತೆ ‘ಶಿವನಿಂದ’ ಶಿರಚ್ಛೇದನದ ನಂತರ ‘ಪ್ಲಾಸ್ಟಿಕ್’ ಸರ್ಜರಿ ಮಾಡಿ ಕೊಟ್ಟರು. ಇಲ್ಲಿ ಕತೆಯಲ್ಲಿ ಬರುವಂತೆ ... ಮೊದಲನೆಯಡೇ ಕಾರ್ಯ ‘ಶಿವ’ ಆನೆಯ ಸೊಂಡಿಲನ್ನು ಕೂಡಿಸಿರಬಹುದೆಂದು. ಇವುಗಳಲ್ಲಿ ಮೊದಲನೆಯಡೇ ಕಾರ್ಯ ಸಾಧುವೆನಿಸುತ್ತದೆ. ಏಕೆಂದರೆ ತಮಿಳರಿಗೆ (ದ್ರಾವಿಡರಿಗೆ) ಇಂದಿಗೂ ಕುಮಾರಸ್ವಾಮಿ ಎಂದರೆ ಎಲ್ಲಿಲ್ಲದ ‘ಭಕ್ತಿ ಬಹುಶಃ ಆತ ತಂದೆಯಂತೆ ಕಪ್ಪಾಗಿಯೂ, ಮುಗ್ಧನಾಗಿರಲು ಸಾಕು. ಇನ್ನು ಗಣಪತಿ ದಪ್ಪನಾಗಿದ್ದು ಸೋಮಾರಿಯಾಗಿದ್ದು ಚಾಣಾಕ್ಷನಾಗಿರಬಹುದು. ಆತ ಅಪ್ಪ ಅಮ್ಮನನ್ನೇ ಪ್ರದಕ್ಷಿಣೆ ಹಾಕಿ, ಬಹುಮಾನ ಗಿಟ್ಟಿಸಿದ ಭೂಪ ! ಆದ್ದರಿಂದ ಆರ್ಯರು ಹೆಚ್ಚಾಗಿ ಗಣಪತಿಯನ್ನು, ದ್ರಾವಿಡರು ಕುಮಾರ ಸ್ವಾಮಿ(ಕಾರ್ತಿಕ)ಯನ್ನು ಆರಾಧಿಸುವ ಪರಿಪಾಠ ಬಂದಿದೆ.

(ಮುಂದುವರೆಯುವುದು......)

ಯೋಗಿಯೊಬ್ಬರ ವ್ಯಂಗ್ಯ -ಸವಾಲುಗಳು

1968ರಲ್ಲಿ ರಚನೆಯಾದ ಈ ಗ್ರಂಥವು ಪ್ರಕಟವಾದದ್ದು 1970ರಲ್ಲಿ. ನಂತರ 1990ರಲ್ಲಿ ಮರುಮುದ್ರಣಗೊಂಡು, ಈಗ ಹೊರಬಂದಿರುವುದು ಪರಿಷ್ಕರಿಸಲ್ಪಟ್ಟ ಮೂರನೆಯ ಆವೃತ್ತಿ. ಇದನ್ನು ಬರೆದಿರುವ ಸದಾಶಿವ ಯೋಗಿಗಳು ನಾಥ ಸಂಪ್ರದಾಯದ ಮಹಾನ್ ಗುರುಗಳಾದ ಮತ್ಸ್ಯೇಂದ್ರನಾಥ, ಗೋರಖನಾಥ ಮತ್ತು ಅಲ್ಲಮಪ್ರಭುಗಳ ಕಟ್ಟಾ ಅನುಯಾಯಿಗಳು ಹಾಗೂ ಸೂಫಿ ಸಂತರಿಂದ ಪ್ರಭಾವಿತಗೊಂಡವರು. ಈ ಗ್ರಂಥದುದ್ದಕ್ಕೂ ಅವರು ಸನಾತನ ಧರ್ಮಕ್ಕೆ ಹಲವು ಸವಾಲುಗಳನ್ನು ಎಸೆದಿದ್ದಾರೆ. ಈ ಸವಾಲುಗಳಿಗೆ ತೂಕ ಬರುವುದು ಯಾಕೆಂದರೆ ತಾನೂ ದೇವರಿಗಾಗಿ ಹಲವು ವರ್ಷ ಹುಡುಕಾಡಿದ ಯೋಗಿಯೊಬ್ಬನ ಬಾಯಿಂದ ಇಂಥ ಮಾತುಗಳು ಬಂದಿರುವುದರಿಂದ ನಾನೂ ಸಹ ಇಂತಹ ದೈವೀಸಿದ್ಧಿಗಳಲ್ಲಿ ಏನನ್ನಾದರೂ ಸಾಧಿಸಿ ಸಿದ್ಧಿ ಪಡೆಯಲೇಬೇಕೆಂಬ ಮೂಲ ಉದ್ದೇಶದಿಂದ ಯಾರಿಗೂ ಹೇಳದೆ ಕೇಳದೆ ಮನೆ ಬಿಟ್ಟು ಹೊರಟವನು. ನಾನು ಇಂತಹವುಗಳನ್ನು ಸಾಧಿಸಿ ಸಿದ್ಧಿ ಪಡೆದವರನ್ನೇ ಗುರುವಾಗಿ ಸ್ವೀಕರಿಸಲು, ಇಡೀ ದೇಶದ ಮೂಲೆ ಮೂಲೆಯನ್ನು ಹುಚ್ಚು ಹಿಡಿದ ಕಜ್ಜಿ ನಾಯಿಯಂತೆ ಅಲೆಯುತ್ತಾ ಎಲ್ಲಾ ವಿಧದ ಗುರುಗಳನ್ನೂ ಆಶ್ರಯಿಸಿ ಅವರು ಹೇಳಿದಂತಹ ಮಂತ್ರ, ಜಪ ತಪ ಮುಂತಾದ ಕರ್ಮಗಳನ್ನೂ ಗುಲಾಮನಂತೆ ಶ್ರದ್ಧೆಯಿಂದ ಆಚರಿಸಿದ್ದಾಗ್ಯೂ ಇವುಗಳ ಫಲ ಏನೂ ಕಾಣದೆ ವಿಫಲನಾದೆ. (ಪು-16) ಎಂದು ಪ್ರಸ್ತಾವನೆಯಲ್ಲಿ ಹೇಳಿಕೊಳ್ಳುವ ಲೇಖಕರು ಸ್ವಂತ ಅನುಭವಗಳನ್ನು ಹಲವೆಡೆ ದಾಖಲಿಸಿದ್ದಾರೆ.

ಈ ಪುಸ್ತಕದಲ್ಲಿ 20 ಅಧ್ಯಾಯಗಳಿವೆ. 'ಭಾರತೀಯ ಭಗವಂತ' ಎಂಬ ಮೊದಲ ಅಧ್ಯಾಯದಲ್ಲಿ, ದೇವರು ಸನಾತನ- ದೇವರು ಆದಿಮಧ್ಯಾಂತ ರಹಿತ- ದೇವರು ಸರ್ವ್ವ್ಯಾಪಿ- ಸ್ವಯಂ ಪ್ರಕಾಶ- ಸೃಷ್ಟಿ ಸ್ಥಿತಿ ಲಯಕರ್ತ ಸ್ವಯಂ ಚೈತನ್ಯ, ದೇವರು ಸ್ವಯಂಭೂ- ನಿರ್ಗುಣ ನಿರಾಕಾರ- ನಾಶರಹಿತ- ದೇವರು ದಾತ- ಸರ್ವಾಂತರ್ಯಾಮಿ- ಸರ್ವಜ್ಞ- ಸರ್ವಶಕ್ತ- ಭಗವಂತನು ದಯಾಮಯ ಮುಂತಾದ ಎಲ್ಲ ನಂಬಿಕೆಗಳನ್ನೂ ಪ್ರಶ್ನಿಸಿ, ದೇವರ ಹೆಸರಿನಲ್ಲಿ ನಡೆಯುತ್ತಿರುವ ಇಂಥ ಆಚಾರಗಳೆಲ್ಲಾ ಕೇವಲ ಮಕ್ಕಳ ಬೊಂಬೆಯಾಟಕ್ಕಿಂತಲೂ ಕೀಳಲ್ಲವೇ? ಯೋಚಿಸಿ ನೋಡಿ....ನಮ್ಮಿಂದಲೇ ಸೃಷ್ಟಿಸಲ್ಪಟ್ಟು, ನಮ್ಮಿಂದಲೇ ಜೀವದಾನ ಪಡೆದು, ನಮ್ಮಿಂದಲೇ ಹೊಗಳಿಸಿಕೊಂಡು, ನಮ್ಮಿಂದಲೇ ತಾನು ಇರಲು ಮನೆ ಮುಂತಾದ ಸಮಸ್ತ ಸೌಕರ್ಯಗಳನ್ನು ಪಡೆದುಕೊಂಡು ಸರ್ವವಿಧಗಳಲ್ಲಿಯೂ ತಾನು ಪರಾವಲಂಬಿಯಂತೆ ಆಯಾ ಪೂಜಾರಿಗಳ ಅಧೀನನಾಗಿ ದೇವಸ್ಥಾನವೆಂಬ ನಿಜ ಜೈಲಿನಲ್ಲಿರುವ ಆ ಅಶಕ್ತ ಜಡ ದೇವರು ನಮಗೆ ಏನು ತಾನೇ ವರಗಳನ್ನು ಕೊಡಬಲ್ಲ? (ಪುಟ-33) ಎಂದು ಹೇಳುತ್ತಾ ದೇವರ ಅಸ್ತಿತ್ವವನ್ನೇ ಅಲ್ಲಗಳೆಯುತ್ತಾರೆ. ದೇವರಿಗಾಗಿ ಕೋಟಿಗಟ್ಟಲೆ ಖರ್ಚು ಮಾಡುವ ಬದಲು ಪ್ರತಿ ಹಳ್ಳಿಯಲ್ಲಿ ಯಲ್ಲಿಯೂ ಪಾಠಶಾಲೆ, ಆಸ್ಪತ್ರೆಗಳನ್ನು ಕಟ್ಟಿಸುವುದೊಳಿತೆಂಬ ಸಲಹೆ ನೀಡುತ್ತಾರೆ. ಬಾಲ್ಯದಲ್ಲಿ ಮಕ್ಕಳಿಗೆ ನಿಜವಾದ ಜ್ಞಾನವನ್ನು ಕೊಡದೆ ಭೀತಿ ಹುಟ್ಟಿಸುವ ಕಥೆಗಳನ್ನು ಹೇಳುವ ತಾಯಂದಿರು, ಪಂಡಿತರು, ಪ್ರಶ್ನೆ ಕೇಳಿದರೆ ಏಟು ಕೊಡುವ ಶಿಕ್ಷಕರು, ಬಾಬಾಗಳ ಮುಂದೆ ಕೈಜೋಡಿಸುವವರು, ಎಲ್ಲದಕ್ಕೂ ರಾಹುಕಾಲ ನೋಡುವ ವಿಜ್ಞಾನಿಗಳು- ಇವರೆಲ್ಲರನ್ನೂ ವ್ಯಂಗ್ಯ ಮಿಶ್ರಿತ ಧಾಟಿಯಲ್ಲಿ ಚುಚ್ಚುತ್ತಾರೆ. 'ನಮ್ಮ ಪುರಾಣಗಳಲ್ಲಿನ ಪುಣ್ಯ ಕಥೆಗಳು' ಎಂಬ ಅಧ್ಯಾಯದಲ್ಲಿ ನಮ್ಮ ಪುರಾಣಗಳಲ್ಲಿ ತುಂಬಿರುವ ದೇವ- ದೇವತೆಯರ ಕಥೆಗಳು ನೀತಿಬಾಹಿರ ಪೊಳ್ಳು ಕಥೆಗಳೆಂದು ಸಾರಾಸಗಟಾಗಿ ತಳ್ಳಿ ಹಾಕುತ್ತಾರೆ. ನಮ್ಮೆಲ್ಲರಿಗೂ ಪರಮಾತ್ಮ ಎನ್ನಿಸಿಕೊಂಡಿರುವ ಶ್ರೀಕೃಷ್ಣ- ಕಳ್ಳ, ಸ್ತ್ರೀಲೋಲ ಎಂದು ಜರಿಯುತ್ತಾರೆ. ಪಾಂಚಾಲಿ ಪತಿವ್ರತೆಯೇ ಎಂಬ ಪ್ರಶ್ನೆ ಕೇಳುತ್ತ ಲಕ್ಷ್ಮೀ - ಸರಸ್ವತಿ- ಪಾರ್ವತಿಯರು ಮತ್ಸರದ ಪಿಶಾಚಿಗಳು ಎನ್ನುತ್ತಾರೆ. ಭೀಷ್ಮಾಚಾರ್ಯರು ನೀರಿನಲ್ಲಿ ಹುಟ್ಟಿದ್ದು, ಅಗಸ್ತ್ಯನು

ಮಡಕೆಯಲ್ಲಿ ಹುಟ್ಟಿದ್ದು, ಅಶ್ವತ್ಥಾಮನು ಕುದುರೆಯಲ್ಲಿ ಹುಟ್ಟಿದ್ದು, ಕೌಶಿಕನು ದರ್ಭೆಯಲ್ಲಿ ಹುಟ್ಟಿದ್ದು, ಶನಿದೇವನು ಕುದುರೆಯ ಹೊಟ್ಟೆಯಲ್ಲಿ ಹುಟ್ಟಿದ್ದು, ಕುಂತಿ ಕಿವಿಯಿಂದ ಪ್ರಸವಿಸಿದ್ದು- ಎಲ್ಲವೂ ಅಸಾಧ್ಯವಾದ ಮಾತುಗಳೆಂದು ಹೇಳಿ, ಇವುಗಳನ್ನು ಅಸಹಜ ಹುಟ್ಟುಗಳು ಎನ್ನುತ್ತಾರೆ. ವಾಲಿಯನ್ನು ಕೊಂದ ರಾಮ ನ್ಯಾಯವಂತನೇ? ಶೂದ್ರ ತಪಸ್ವಿಯನು ಕೊಂದ ರಾಮ ಧರ್ಮರಕ್ಷಕನೆ? ಲಂಕಾ ದಹನ ಮಾಡಿ ಸಾವಿರಾರು ಜನರನ್ನು ನಾಶ ಮಾಡಿದ ರಾಮ ಲೋಕ ಪೂಜ್ಯನೇ? ಸೀತೆಯನ್ನು ಅರಣ್ಯಕ್ಕೆ ಅಟ್ಟಿದ ರಾಮ ಪುರುಷೋತ್ತಮನೇ? - ಹೀಗೆ ರಾಮನ ಬಗ್ಗೆ ಹಲವು ಪ್ರಶ್ನೆಗಳನ್ನು ಕೇಳಿ ರಾಮಭಜನೆಯಿಂದ ಮೋಕ್ಷ ಸಿಗುವುದಾದರೂ ಹೇಗೆ? ಎಂದು ಕಟಕಿಯಾಡುತ್ತಾರೆ. ಪುರಾಣದ ಹಲವು ಕಥೆಗಳಲ್ಲಿ ದೇವ- ದೇವತೆಗಳು ಸ್ತ್ರೀಲಂಪಟ- ಪುರುಷ ಲಂಪಟರಾಗಿರುವುದನ್ನು ಎತ್ತಿ ತೋರಿಸುತ್ತಾರೆ. ಈ ತರಹದ ಪುರಾಣಗಳನ್ನು ಸೃಷ್ಟಿಸಿದವರು ಅವಿಚಾರಿಗಳೆಂದೂ, ಇವುಗಳನ್ನೇ ಜನರಿಗೆ ಹೇಳುವ ಕಾಯಕ ಕೈಗೊಂಡಿರುವ ಪಂಡಿತರು, ಪೂಜಾರಿಗಳು, ಜಗದ್ಗುರುಗಳು- ಇವರುಗಳನ್ನು ಹೊಟ್ಟೆ ಹೊರೆದುಕೊಳ್ಳಲು ಅನಾಚಾರ ಬೋಧೆ ಮಾಡುತ್ತಿರುವ ಪಾಖಂಡಿಗಳೆಂದೂ ಕರೆದಿದ್ದಾರೆ. 'ಭಾಷೆ' ಯನ್ನು ಕುರಿತ ಅಧ್ಯಾಯದಲ್ಲಿ ಭಾವನೆಯ ಸಂಕೇತವೇ ಭಾಷೆ, ವ್ಯಾಕರಣಬದ್ಧ ಪಾಂಡಿತ್ಯವೆಂಬುದೇ ಭಾಷಾಜ್ಞಾನವಲ್ಲ ಎನ್ನುತ್ತಾರೆ. 'ವೇದಗಳು ಮತ್ತು ಪುರಾಣಗಳು' ಎಂಬ ಅಧ್ಯಾಯದ ತುಂಬ ಸ್ವರ್ಗ- ನರಕಗಳೆಂಬ ಕಲ್ಪನೆಗಳ ಬಗ್ಗೆ ಲೇವಡಿ ಮಾಡುತ್ತ, ಪುರೋಹಿತರು- ಜಗದ್ಗುರುಗಳನ್ನು ಮಧ್ಯವರ್ತಿ ಏಜಂಟರೆಂದು ಕರೆಯುತ್ತ, ಸ್ವರ್ಗಕ್ಕೇರಲು- ದೇವರ ದರ್ಶನ ಮಾಡಲು ಹಣವಿದ್ದರೆ ಮಾತ್ರ ಸಾಧ್ಯ ಎಂದು ವ್ಯಂಗ್ಯವಾಡುತ್ತ ಯಾಗದಿಂದ ಎಲ್ಲಾದರೂ ಮಕ್ಕಳಾಗಲು ಸಾಧ್ಯವೇ? ಮಳೆ ಬರಲು ಸಾಧ್ಯವೇ? ಮುಂತಾದ ಪ್ರಶ್ನೆಗಳನ್ನು ಕೇಳುತ್ತಾರೆ. 'ರಾಮಾಯಣ' ಎಂಬ ಅಧ್ಯಾಯದಲ್ಲಿ, ರಾಮ ನಾವು ತಿಳಿದಂತೆ ಪುರುಷೋತ್ತಮನಲ್ಲ ಎಂಬುದನ್ನು ದೃಷ್ಟಾಂತಗಳ ಸಹಿತ ನಿರೂಪಿಸುತ್ತಾರೆ. ಮಹಾಭಾರತ' ಎಂಬ ಅಧ್ಯಾಯದಲ್ಲಿ ಏಕಲವ್ಯನ ಕಥೆಯನ್ನು ಪ್ರಸ್ತಾಪಿಸುತ್ತ, ಈ ವಿಧದ ನಯವಂಚಕ ಗುರುಗಳಿಂದ ಪರಮ ಪವಿತ್ರವಾದ ಗುರು ಪರಂಪರೆಗೇ ಕಳಂಕ ತಂದಿರುವಂತಹ ಈತನ ಹೆಸರಿನಲ್ಲಿಯೇ ಇಂದು ನಮ್ಮ ವೀರರಿಗೆ 'ದ್ರೋಣ' ಪ್ರಶಸ್ತಿಯೇ? ಇದೊಂದು ಗೌರವ ಪ್ರಶಸ್ತಿಯೇ? ಎಂದು ಕೇಳಿ ದ್ರೋಣಾಚಾರ್ಯರು ಮಾಡಿದ ಅನ್ಯಾಯವನ್ನು ಬಯಲಿಗೆಳೆಯುತ್ತಾರೆ. ಹಾಗೆಯೇ ಕರ್ಣನಿಗಾದ ಮೋಸ, ದ್ರೌಪದಿಯ ವಸ್ತ್ರಾಪಹರಣ, ಅರಗಿನ ಮನೆಯಲ್ಲಿ ಶೂದ್ರ ಕುಟುಂಬದ ದಹನ - ಇಂತಹ ಪ್ರಸಂಗದಲ್ಲಿ ಮಹಾಭಾರತದ "ಪೂಜನೀಯ"ರೆಲ್ಲ ನಡೆದುಕೊಂಡ ರೀತಿ ಖಂಡನೀಯ ಎನ್ನುತ್ತಾರೆ. 'ಭಾರತೀಯ ಧರ್ಮಶಾಸ್ತ್ರದಲ್ಲಿ ಸ್ತ್ರೀಗೆ ಕೊಟ್ಟಿರುವ ಸ್ಥಾನ' ಎಂಬ ಅಧ್ಯಾಯದಲ್ಲಿ ಪುರುಷರ ಸೋಗಲಾಡಿತನ, ವಿಧವೆಯರ ದುಃಸ್ಥಿತಿ, ಸ್ತ್ರೀಯರ ಮಾರಾಟ, ಮನುಧರ್ಮಶಾಸ್ತ್ರದ ಅಮಾನವೀಯತೆಗಳ ಬಗ್ಗೆ ಬರೆಯುತ್ತಾರೆ. 'ಮನುವಿನ ಮಾನವತ್ವ' ಎಂಬ ಅಧ್ಯಾಯದಲ್ಲಿ ಮನುವೆಂಬಾತನೂ ಒಬ್ಬ ಮನುಷ್ಯನೇ? ಎಂದು ಉದ್ಗಾರ ತೆಗೆಯುತ್ತಾರೆ. ಹರಿಜನರಾರು- ಗಿರಿಜನರಾರು? ಎಂಬ ಅಧ್ಯಾಯದಲ್ಲಿ, ಮದುವೆಯಾಗುವುದಕ್ಕಿಂತ ಮೊದಲೇ ರಜಸ್ವಲೆಯಾದ ಯುವತಿಯರನ್ನು ಕಾಡಿನಲ್ಲಿ ಬಿಟ್ಟು ಬರುವ ದುಷ್ಟ ಪದ್ಧತಿ ಅಂದಿನ ಸಮಾಜದಲ್ಲಿ ಇತ್ತೆಂದೂ, ಊರಿನ ಪುರುಷರು ಈ ಕಾಡಿನ ಯುವತಿಯೊಂದಿಗೆ ಗುಪ್ತವಾಗಿ ದೈಹಿಕ ಸಂಬಂಧ ಸಾಧಿಸಿದಾಗ ಹುಟ್ಟಿದವರ ಸಂತಾನವೇ ಗಿರಿಜನರಾದರು ಎನ್ನುತ್ತಾರೆ. ಉದ್ಯೋಗಕ್ಕನುಗುಣವಾಗಿ ಜನರನ್ನು ವಿಂಗಡಿಸಿದ ವರ್ಣಾಶ್ರಮ ಪದ್ಧತಿ, ಇಂದು ಜಾತಿ- ಜಾತಿಗಳಾಗಿ ಬೇರ್ಪಟ್ಟು ವಿಷಕಾರಕವಾಗಿದೆ ಎನ್ನುತ್ತಾರೆ. 'ಸತ್ಯಶೋಧಕರುಗಳಿಗೆ ಪ್ರಶಸ್ತಿಗಳು' ಎಂಬ ತಲೆಬರಹದಲ್ಲೇ ವ್ಯಂಗ್ಯ ವಿರುವ ಅಧ್ಯಾಯದಲ್ಲಿ ಗೆಲಿಲಿಯೋ, ಸಾಕ್ರೆಟಿಸ್, ಏಸು, ಬುದ್ಧ- ಇವರೆಲ್ಲರನ್ನೂ ಸಮಾಜ ಎಷ್ಟು ನೀಚವಾಗಿ ನಡೆಸಿಕೊಂಡಿದೆ ಎಂಬುದನ್ನು ಹೇಳುತ್ತಾರೆ. 'ಕರ್ಮಕಾಂಡ' ಎಂಬ ಅಧ್ಯಾಯದಲ್ಲಿ, ಇವರ

ಹರಿತವಾದ ಲೇಖನಿ ಪೂಜಾರಿಗಳು, ಜಗದ್ಗುರುಗಳು ಜ್ಯೋತಿಷಿಗಳು, ತೀರ್ಥಯಾತ್ರೆ, ಮಡಿ-ಮೈಲಿಗೆ, ತೀರ್ಥಸ್ನಾನ, ಪಂಚಾಂಗ, ಮಾಟ-ಮಂತ್ರ, ಬೂದಿ ಬಾಬಾಗಳು, ವಶೀಕರಣ, ಅಂಜನ, ಮಠಾಧಿಪತಿಗಳು ಮುಂತಾದವರ ಬಗ್ಗೆ ಪುಂಖಾನುಪುಂಖವಾಗಿ ಟೀಕಾಸ್ತ್ರಗಳ ಸುರಿಮಳೆಯನ್ನೇ ಸುರಿಸುತ್ತದೆ. 'ಭಾರತೀಯ ವಿವಾಹ ಪದ್ಧತಿ;' ಎಂಬ ಅಧ್ಯಾಯದಲ್ಲಿ, ವಿವಾಹ ಪದ್ಧತಿಯಲ್ಲಿರುವ ಆಡಂಬರ-ಶೋಷಣೆಗಳನ್ನು ಬಯಲಿಗೆಳೆಯುತ್ತಾರೆ. 'ವಿಜ್ಞಾನ ಮತ್ತು ಪವಾಡ' 'ಶಂಕರಾಚಾರ್ಯರ ಪರಕಾಯ ಪ್ರವೇಶ', 'ಅದೃಶ್ಯನಾಗುವ ಮಂತ್ರ'-ಮುಂತಾದ ಪ್ರಬಂಧಗಳಲ್ಲಿ ವೈಜ್ಞಾನಿಕ ಮನೋಧರ್ಮವನ್ನು ಎತ್ತಿ ಹಿಡಿಯುತ್ತಾರೆ. ಜ್ಯೋತಿಷ್ಯಾಸ್ತ್ರದ ಬಗ್ಗೆ ಹೇಳುತ್ತ, ತಾವು ಜ್ಯೋತಿಷ್ಯ ಕಲಿಯಬೇಕೆಂದು ಕಾಶಿಯಲ್ಲಿ ಆಸ್ಥಾನ ವಿದ್ವಾನ್ ಪಂಡಿತ ವೇದಮೂರ್ತಿ ಕರಿಬಸವ ಶಾಸ್ತ್ರಿಗಳಲ್ಲಿ ಶಿಷ್ಯತ್ವ ಸ್ವೀಕರಿಸಿದಾಗ, ಗುರುಗಳು ಪಾಠ ಮಾಡಿದಾಗ ತಮ್ಮಲ್ಲೆದ್ದ ಪ್ರಶ್ನೆಗಳನ್ನು ಕೇಳಿ-ಅವರಿಂದ ಅವಮಾನಿತನಾಗಿ, ಶಿಷ್ಯವೃತ್ತಿಯನ್ನೇ ಬಿಟ್ಟುದಾಗಿ ಹೇಳುತ್ತಾರೆ. 'ನನ್ನ ಅನುಭವದ ಪ್ರಕಾರ ಜ್ಯೋತಿಷ್ಯಶಾಸ್ತ್ರ ಎಂಬುದು ಒಂದು ಊಹೆಯ ಕುದುರೆ ಜೂಜು ಇದ್ದಂತೆ. ಗೆದ್ದರೆ ಅದೃಷ್ಟ....ಸೋತರೆ ಕುಜ, ರಾಹುಗಳು ಅಡ್ಡ ಬಂದವು ಎಂದು ನುಣುಚಿಕೊಳ್ಳುವ ಒಂದು ಕುತಂತ್ರ ವಿದ್ಯೆ'(ಪುಟ-187) ಎನ್ನುತ್ತಾರೆ. ಒಟ್ಟಿನಲ್ಲಿ ಈ ಪುಸ್ತಕ, ನಮ್ಮ ಸನಾತನ ಧರ್ಮ - ಪುರಾಣ - ನಂಬಿಕೆಗಳು - ದೇವರು

-ಎಲ್ಲವನ್ನೂ ತಾರ್ಕಿಕವಾದ ಪ್ರಶ್ನೆಗಳನ್ನು ಕೇಳಿ ಬಯಲಲ್ಲಿ ತಂದು ನಿಲಿಸುತ್ತದೆ. ಸದಾಶಿವಯೋಗಿಗಳು ಸ್ವತಃ ಯೋಗಿಗಳಾಗಿರುವುದರಿಂದಲೇ ಅವರ ಮಾತುಗಳಿಗೆ ತೂಕವಿದೆ. ಈ ಪುಸ್ತಕದ ಚೂಪಾದ ವ್ಯಂಗ್ಯ ಆಸ್ತಿಕರನ್ನು ಕಂಗೆಡಿಸಬಲ್ಲುದು. ಒಮ್ಮೆ ಓದಲೇಬೇಕಾದ ಪುಸ್ತಕ.

-ಎಸ್.ಮಾಲತಿ (ಪ್ರಜಾವಾಣಿ ಪತ್ರಿಕೆಯಲ್ಲಿ ಬಂದ ಪುಸ್ತಕ ವಿಮರ್ಶೆ)

★ ★ ★ ★

ನವರಾತ್ರಿ ನಿಮಿತ್ತ ಬಸವೇಶ್ವರ ಪೂಜೆ
ವಚನ ಲೇಖನ ವ್ರತಕ್ಕೆ ಕರೆ

"ಆದಿ ಪುರಾಣ ಅಸುರರಿಗೆ ಮಾರಿ" "ಪುರಾಣವೆಂಬುದು ಪುಂಡರಗೋಷ್ಠಿ" ಎಂಬ ಶರಣ ವಾಣಿಯಂತೆ ಬಸವ ತತ್ತ್ವಾನುಯಾಯಿಗಳು ದೇವಿ ಪುರಾಣವನ್ನು ಪಾರಾಯಣ ಮಾಡಬಾರದು. ಅದು ಕೊಲುವವರ ಕಥೆ, ಶರಣರ ಚರಿತ್ರೆಗಳು ಚಾಮರಸ ಕವಿ ಹೇಳುವಂತೆ ಸತವರ ಕಥೆಗಳೂ ಅಲ್ಲ, ಸಾಯಿಸುವವರ ಶೌರ್ಯದ(ಕ್ರೌರ್ಯ)ದ ವರ್ಣನೆಯ ಕಥೆಗಳಲ. ಆದ್ದರಿಂದ ಆಶ್ವಯುಜ ಪ್ರತಿಪದೆ ದಿ.2-10-2005 ರಿಂದ 10 ದಿವಸ ಶರಣ ಬಂಧುಗಳು (ಅವನ್ನೆಲ್ಲ ಪೂಜಿಸುವ, ಪಾರಾಯಣ ಮಾಡುವ ರೂಢಿ ಇದ್ದವರು ಸಹ ಅವನ್ನು ಬಿಟ್ಟು,) ಗುರು ಬಸವಣ್ಣನವರ ಭಾವಚಿತ್ರ ಪ್ರತಿಷ್ಠಾಪಿಸಿ, ಪೂಜಿಸಿ, ವಚನ ಸಾಹಿತ್ಯದ ಪಠಣ, ಲೇಖನ ಮಾಡಬೇಕು.

ಚಿಕ್ಕ ಆಕಾರದ ಹಾಳೆಗಳನ್ನು ತೆಗೆದುಕೊಂಡು ಒಂದು ಹಾಳೆಯಲ್ಲಿ ಒಂದು ವಚನ, ವಚನಕಾರರ ಹೆಸರು, ಲೇಖನ ಮಾಡಿದವರ ಹೆಸರು ಬರೆದು ಸಂಗ್ರಹಿಸಿ ಇಟ್ಟುಕೊಂಡು 'ಬನ್ನಿ' ಹಬ್ಬದ ದಿನ ದಿ.12-10-2005 ಯಾಂತ್ರಿಕವಾಗಿ ಗಿಡದ ಎಲೆ ಕೊಡುವ ಬದಲು "ಶರಣು ಬನ್ನಿ" ಎಂದು ಪರಸ್ಪರ ಭೇಟಿಯಾಗಿ ಒಂದು ವಚನ ಪತ್ರ, ಸ್ವಲ್ಪ ಕಲ್ಲುಸಕ್ಕರೆ ಕೊಟ್ಟು ಪರಸ್ಪರ ಶುಭಾಶಯವನ್ನು ವಿನಿಮಯ ಮಾಡಿಕೊಳ್ಳಬೇಕು.

ದಿ.13-10-2005 ವಿಜಯ ದಶಮಿಯಂದು ಸಾಮೂಹಿಕವಾಗಿ ಅಕ್ಕನಾಗಲಾಂಬಿಕೆಯ ಸಂಸ್ಮರಣೆ ಹಾಗೂ ಬಸವ ಧರ್ಮ ವಿಜಯೋತ್ಸವವನ್ನು ಆಚರಿಸಬೇಕು. ಬಸವ ಮಂಟಪ, ರಾಷ್ಟ್ರೀಯ ಬಸವ ದಳ ಇಲ್ಲದಲ್ಲಿ ವೈಯಕ್ತಿಕವಾಗಿ ಮನೆಗಳಲ್ಲಿ ಆಚರಿಸಿಕೊಳ್ಳಬೇಕು.

-ಜಗದ್ಗುರು ಮಾತೆ ಮಹಾದೇವಿ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666



ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಹತ್ತೊಂಬತ್ತನೆಯ
ಶರಣ ಮೇಳ

2006ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹತ್ತೊಂಬತ್ತನೆಯ ಶರಣ ಮೇಳವು 2006ರ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶ ವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಪಾಲ್ಗೊಳ್ಳಿರಿ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000 / 10000 ರೂಪಾಯಿಗಳ ಪುದುವಟ್ಟು (F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.


ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ. ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-23325335/23322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂ : 08351-268038/268007/268338



ಬಸವ ಗಂಗೋತ್ರಿಯಲ್ಲಿ ದಿನಾಂಕ 4-9-2005ರಂದು ವಿವಿಧ ವಯಸ್ಕರಿಗೆ ಸ್ಪರ್ಧೆ ಇಟ್ಟಾಗ ಹಗ್ಗ ಜಗ್ಗಾಟದಲ್ಲಿ ಭಾಗವಹಿಸಿದ ಅನಾಥಾಲಯದ ಬಾಲಕರು



ಹಗ್ಗ ಜಗ್ಗಾಟದಲ್ಲಿ ಭಾಗವಹಿಸಿದ ಬಾಲಕಿಯರು.



ದಿ.18-9-2005 ರಂದು ಹುಣ್ಣಿಮೆ ದಿನದಂದು ವೀರ ಗಣಾಚಾರಿ ಮಡಿವಾಳ ಮಾಚಿದೇವರ ಸಂಸ್ಮರಣೆ ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ಜರುಗಿದಾಗ ಪೂಜ್ಯ ಮಾತಾಜಿಯವರಿಂದ ಪ್ರವಚನ ಸನ್ನಿಧಿ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಜಿ



ಹುಣ್ಣಿಮೆ ಕಾರ್ಯದಲ್ಲಿ ಪ್ರವಚನ ಆಲಿಸುತ್ತಿರುವ ಅನಾಥಾಲಯದ ಮಕ್ಕಳು (ಫೋಟೋಗ್ರಾಫಿ) ಶರಣ ಮಹಾದೇವ ಬೇಲೂರು, ಬಾತಾಂಬ್ರಾ




ದಿ.7-9-2005 ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಜಿಗಳ 78 ನೇ ಜಯಂತಿಯನ್ನು ಆಚರಿಸಲಾಯಿತು.



ಪ್ರತಿ ತಿಂಗಳಿನ ಮೊದಲನೇ ಭಾನುವಾರ ಬಸವ ಗಂಗೋತ್ರಿಯಲ್ಲಿ ಉದ್ಘಾಟಿಸಿದರು.

ದಿ.18.9.2005 ರಂದು ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ಶರಣ ಸಂಗಮ ಸಾಮೂಹಿಕ ಪ್ರಾರ್ಥನೆ ಮತ್ತು ಪ್ರವಚನದ ನಂತರ ಶರಣ ಶರಣೆಯರು ಆಟದ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಮ್ಯೂಸಿಕಲ್ ಚೇರ್‌ದಲ್ಲಿ ಭಾಗವಹಿಸಿರುವ ದೃಶ್ಯ. ದಿ.4-9-2005

CPMG/KA/BGW-50/2003-2005 WPP (W) - 17 R.No. 19980/70



ಬೆಂಗಳೂರು ರಾಷ್ಟ್ರೀಯ ಬಸವ ದಳದ ವಾರ್ಷಿಕೋತ್ಸವದಲ್ಲಿ ನೃತ್ಯಾಭಿನಯ ಮಾಡಿ ಶರಣೆ ಸುನಿತಾ ಕುಮಾರ್ ಅವರ ಕುಂಟುಂಬದವರು.